ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯದಲ್ಲಿ ಶಿಸ್ತು ಮತ್ತು ಆಡಳಿತವನ್ನು ಚುರುಕುಗೊಳಿಸುವ ಹಿತದೃಷ್ಟಿಯಿಂದ ಈ ಹಿಂದೆ ಆಡಳಿತ ಅಧಿಕಾರವನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ವ್ಯಾಪ್ತಿಗೆ ನೀಡಲಾಗಿತ್ತು. ಅದೇ ರೀತಿ ಆಡಳಿತವನ್ನು ಚುರುಕುಗೊಳಿಸಲು ಹಾಗೂ ವೈದ್ಯರು/ಸಿಬ್ಬಂದಿ ವರ್ಗ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುವ ಹಿತದೃಷ್ಟಿಯಿಂದ ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ಆಸ್ಪತ್ರೆಗಳು/ ಚಿಕಿತ್ಸಾಲಯಗಳ ಆಡಳಿತ ಅಧಿಕಾರವನ್ನು ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವ್ಯಾಪ್ತಿಗೆ ನೀಡಲಾಗಿತ್ತು. ಕ್ರಮೇಣ ಸದರಿ ಆದೇಶಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ಆಯುಷ್ ವಿಷಯಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಚಟುವಟಿಕೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಸಮೀಕರಣಗೊಳಿಸುವುದು (mainstream) ಅಗತ್ಯವಿದೆ. ಈ ಬಗ್ಗೆ ಸೂಕ್ತ ರೀತಿಯ ಸಮನ್ವಯ ಮಾಡುವುದು ಕೂಡ ಅವಶ್ಯವಾಗಿದೆ. ಇದಲ್ಲದೆ ಆಯುಷ್ ಇಲಾಖೆಯ ಕಾರ್ಯನಿರ್ವಹಣೆಯ ಕುರಿತು ಅನೇಕ ಆಪಾದನೆಗಳು ಇದ್ದು, ಅವುಗಳನ್ನು ಸರಿಪಡಿಸಲು ಅಗತ್ಯ ಕ್ರಮ ವಹಿಸಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಸಿದ್ದ ಮತ್ತು ಹೋಮಿಯೋಪತಿ) ಇಲಾಖೆಯ ಕಾರ್ಯವ್ಯಾಪ್ತಿಯನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ವ್ಯಾಪ್ತಿಗೆ ತರುವುದು ಅವಶ್ಯವಿದೆಯೆಂದು ಸರ್ಕಾರವು ಪರಿಗಣಿಸಿ ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 29 ಎಫ್‌ಪಿಆರ್ 2008, ಬೆಂಗಳೂರು, ದಿನಾಂಕ: 6ನೇ ಫೆಬ್ರವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಆಯುಷ್ (ಆಯುರ್ವೇದ, ಯೋಗ, ಯುನಾನಿ, ಸಿದ್ದ ಮತ್ತು ಹೋಮಿಯೋಪತಿ) ಇಲಾಖೆಯ ಕಾರ್ಯವ್ಯಾಪ್ತಿಯನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ವ್ಯಾಪ್ತಿಗೆ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೀಡಲಾಗಿದೆ. ನಿರ್ದೇಶಕರು, ಆಯುಷ್ (ಆಯುರ್ವೇದ, ಯೋಗ, ಯುನಾನಿ, ಸಿದ್ದ ಮತ್ತು ಹೋಮಿಯೋಪತಿ) ಇಲಾಖೆ ಹಾಗೂ ಅವರ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧೀನ ಅಧಿಕಾರಿಗಳು ಇನ್ನು ಮುಂದೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನದಡಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು.

ಆಯುಷ್ ಇಲಾಖೆಗೆ ಸಂಬಂಧಪಟ್ಟಂತೆ ಆಡಳಿತಾತ್ಮಕ ಮತ್ತು ಆರ್ಥಿಕ ಅಧಿಕಾರವನ್ನು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರಿಗೆ ನೀಡುವ ಕುರಿತು ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

ಭಾರತ ರಾಷ್ಟ್ರಪತಿಗಳ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.269

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಪುರಸಭಾ ನೌಕರರನ್ನು ಕರ್ನಾಟಕ ಮುನಿಸಿಪಾಲಿಟಿ ಅಧಿನಿಯಮ 1964ರ ಕಲಂ 365(2)(ಎ) ಪ್ರಕಾರ ಕರ್ನಾಟಕ ಪೌರಾಡಳಿತ ಸೇವಾ ಅಧಿಕಾರಿಗಳೆಂದು (ಕೆಎಂಎಎಸ್) ಆದೇಶಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ನಅಇ 258 ಇಎಂಸಿ 94, ದಿನಾಂಕ 9–12–98.

2. ಸರ್ಕಾರಿ ಆದೇಶ ಸಂಖ್ಯೆ: ನಅಇ 34, ಇಎಂಸಿ 05, ದಿನಾಂಕ 29–7–2005.

3. ಪೌರಾಡಳಿತ ನಿರ್ದೇಶನಾಲಯದ ಕಡತ ಸಂಖ್ಯೆ: ಪೌನಿ: ಕೆಎಂಎಎಸ್/ಸಿಆರ್–09/2004–05.

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ: ನಅಇ 258 ಇಎಂಸಿ 94, ದಿನಾಂಕ 9–12–98ರ ಕಾರ್ಯಕಾರಿ ಆದೇಶದ ಪ್ರಕಾರ ಈ ಕೆಳಕಂಡ ವೃಂದಗಳಲ್ಲಿ 5 ವರ್ಷ ಸೇವೆ ಸಲ್ಲಿಸಿದ ನೌಕರರನ್ನು ಶೇಕಡಾವಾರು ಸಂಖ್ಯೆಯಲ್ಲಿ ಕರ್ನಾಟಕ ಪೌರಾಡಳಿತ ಸೇವಾ ವೃಂದದ ಕೆ.ಎಂ.ಎ.ಎಸ್. ಶ್ರೇಣಿ–2ರ ಹುದ್ದೆಗೆ ಸೇರ್ಪಡೆ ಮಾಡಲು ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿತ್ತು.

1	ನೇರ ನೇಮಕಾತಿ ಮೂಲಕ		ಶೇಕಡಾ 33.33	33 ಹುದ್ದೆಗಳು
2	ಪೌರಸೇವಾ ವೃಂದದ ನೌಕರರಿಂದ ಆಯ್ಕೆ			
	(ಅ)	ಕಛೇರಿ ವ್ಯವಸ್ಥಾಪಕರು	ಶೇಕಡಾ 24.76	25 ಹುದ್ದೆಗಳು
	(ಆ)	ಕಂದಾಯ ಅಧಿಕಾರಿಗಳು	ಶೇಕಡಾ 19.05	19 ಹುದ್ದೆಗಳು
	(ಇ)	ಹಿರಿಯ ಆರೋಗ್ಯ ನಿರೀಕ್ಷಕರು	ಶೇಕಡಾ 22.85	23 ಹುದ್ದೆಗಳು
			ಒಟ್ಟು	**100 ಹುದ್ದೆಗಳು**

ಪೌರಾಡಳಿತ ನಿರ್ದೇಶಕರ ಶಿಫಾರಸ್ಸಿನಂತೆ ಹಿರಿಯ ಆರೋಗ್ಯ ನಿರೀಕ್ಷಕರು, ವ್ಯವಸ್ಥಾಪಕರು ಹಾಗೂ ಕಂದಾಯ ಅಧಿಕಾರಿಗಳಿಗೆ ಮುಂಬಡ್ತಿಗೆ ಬೇಕಾದ ಅನುಪಾತವನ್ನು ಸಮವಾಗಿರಬೇಕೆಂದು ಹಾಗೂ ಪೌರಾಡಳಿತ ನಿರ್ದೇಶನಾಲಯದ ನೌಕರರುಗಳಿಗೆ ಮುಂಬಡ್ತಿ ಅವಕಾಶ ಇಲ್ಲದಿರುವುದರಿಂದ ಅವರಿಗೂ ಸಹ ಕೆಎಂಎಎಸ್ ವೃಂದದಲ್ಲಿ ವಿಲೀನಗೊಳಿಸಿ ಒಟ್ಟಿಗೆ ಅವಕಾಶತೆಯನ್ನು ಕಲ್ಪಿಸಲು, ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿದ್ದ ಅನುಪಾತವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಮೇಲೆ ಓದಲಾದ (2)ರ ಆದೇಶದಲ್ಲಿ ಆದೇಶಿಸಲಾಗಿದೆ.

1	Direct Recruitment		33-1/3
2	By Absorption		66.2/3
	(a)	Managers belonging to Municipal Service	21.50%
	(b)	Revenue Officers belonging to Municipal service	21.50%
	(c)	Sr. Health Inspectors belonging to Municipal service	21.50%
	(d)	Managers in the office of DMA	2.16%

ಮೇಲೆ ಕ್ರಮಾಂಕ (3)ರಲ್ಲಿ ಓದಲಾದ ಏಕ ಕಡತದಲ್ಲಿ ಪೌರಾಡಳಿತ ನಿರ್ದೇಶಕರು ಹಿರಿಯ ಆರೋಗ್ಯ ನಿರೀಕ್ಷಕರ ವೃಂದದಲ್ಲಿರುವ ಶ್ರೀ ಹೆಚ್.ಎಸ್. ನಾಗರಾಜು ಇವರನ್ನು ಕೆಎಂಎಎಸ್ ವೃಂದಕ್ಕೆ ವಿಲೀನಗೊಳಿಸಿ ಸೇರ್ಪಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳನ್ನು ಗಮನಿಸಿದ ಸರ್ಕಾರವು ಪೌರಾಡಳಿತ ನಿರ್ದೇಶನಾಲಯರವರು ಶಿಫಾರಸ್ಸು ಮಾಡಿರುವಂತೆ ನಿಯಮಾನುಸಾರ ಅರ್ಹತೆ ಹೊಂದಿರುವ ಶ್ರೀ ಹೆಚ್.ಎಸ್. ನಾಗರಾಜ್ ಇವರನ್ನು ಕರ್ನಾಟಕ ಪೌರಾಡಳಿತ ಅಧಿನಿಯಮ 1964ರ ಕಲಂ 365(2)(ಎ) ಪ್ರಕಾರ ವೇತನ ಶ್ರೇಣಿ 4575–8400ರಲ್ಲಿ ಕರ್ನಾಟಕ ಪೌರಾಡಳಿತ ಸೇವಾ ಅಧಿಕಾರಿಗಳ ಹುದ್ದೆಗೆ ವಿಲೀನಗೊಳಿಸುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 68 ಇಎಂಸಿ 2007, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ 2008.

ಸರ್ಕಾರವು ಪ್ರಸ್ತಾವನೆಯಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ಪೌರಾಡಳಿತ ಅಧಿನಿಯಮ 1964ರ ಕಲಂ 365(2)(ಎ) ಪ್ರಕಾರ ಪೌರಸೇವಾ ವೃಂದದ ಹಿರಿಯ ಆರೋಗ್ಯ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಹೆಚ್.ಎಸ್. ನಾಗರಾಜ್, ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಪೌರ ಸೇವಾ ವೃಂದದ ಅಧಿಕಾರಿಗಳೆಂದು ವೇತನ ಶ್ರೇಣಿ–4575–8400 (ಮುಖ್ಯಾಧಿಕಾರಿ ಶ್ರೇಣಿ–2) ಹುದ್ದೆಯ ಸ್ಥಾನಮಾನವನ್ನು ನೀಡಿ, ವೇತನವನ್ನೊಳಗೊಂಡಂತೆ ಎಲ್ಲಾ ಸೇವಾ ಸೌಲಭ್ಯಗಳನ್ನು ಕೆ.ಎಂ.ಎ.ಎಸ್. ಅಧಿಕಾರಿಗಳಿಗೆ ಅನ್ವಯವಾಗುವ ಸೇವಾ ನಿಯಮಾವಳಿಗೊಳಪಟ್ಟು ಹಾಗೂ ಈ ಕೆಳಕಂಡ ನಿಬಂಧನೆಗೊಳಪಡಿಸಿ ವಿಲೀನಗೊಳಿಸಿ ಆದೇಶಿಸಲಾಗಿದೆ:

(1) ಶ್ರೀ ಹೆಚ್.ಎಸ್. ನಾಗರಾಜ್, ಇವರು ಸರ್ಕಾರದ ಆದೇಶ ಸಂಖ್ಯೆ: ನಅಇ 258 ಇಎಂಸಿ 94, ದಿನಾಂಕ 9–12–98ರಲ್ಲಿ ತಿಳಿಸಿರುವಂತೆ ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಗೆ ನಿಗದಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಮುಖ್ಯಾಧಿಕಾರಿ ಶ್ರೇಣಿ–2 ಹುದ್ದೆಯಲ್ಲಿ ಕರ್ತವ್ಯ ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷದೊಳಗಾಗಿ ಪಾಸು ಮಾಡತಕ್ಕದ್ದು.

(2) ಪ್ರಸ್ತುತ ಹೊರಡಿಸಿರುವ ವಿವಿಧ ವೃಂದಗಳ ಅಂತಿಮ ಜೇಷ್ಠತಾ ಪಟ್ಟಿಯನ್ನು ಯಾವುದೇ ಮಾರ್ಪಾಡುಗಳನ್ನು ಮಾಡಲು ನ್ಯಾಯಾಲಯಗಳು ಆದೇಶಿಸಿದ್ದಲ್ಲಿ, ಆ ಪ್ರಕಾರ ಪೌರಾಡಳಿತ ನಿರ್ದೇಶಕರು 2 ತಿಂಗಳೊಳಗಾಗಿ ಈ ಬಗ್ಗೆ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಹೊರಡಿಸಿ ಸರ್ಕಾರಕ್ಕೆ ತಿಳಿಸತಕ್ಕದ್ದು.

ಸದರಿ ನೌಕರರನ್ನು ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ–2ರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸುವವರೆಗೆ ಮತ್ತು ಮುಂದಿನ ಆದೇಶದವರೆಗೆ ಅವರು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಮುಂದುವರಿಸಲಾಗಿದೆ.

ಭಾರತದ ರಾಷ್ಟ್ರಪತಿಯವರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.229

ಬಿ.ಜಿ. ವಾಲಿ

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಸಿ.ಎ. ಅಶ್ವಿನಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೌಡ್ಲೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇವರನ್ನು ಸೇವೆಯಿಂದ ವಜಾಗೊಳಿಸುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರ ಪತ್ರ ಸಂ: ಜೆಆರ್ಒ (2) 355/2006–07, ದಿನಾಂಕ 24–8–2007.

ಪ್ರಸ್ತಾವನೆ :

ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಡಾ: ಸಿ.ಎ. ಅಶ್ವಿನಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೌಡ್ಲೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ದಿನಾಂಕ 12–9–2002ರಂದು ಸರ್ಕಾರಿ ಸೇವೆಗೆ ಸೇರಿದ್ದು ಸದರಿ ವೈದ್ಯರು ದಿನಾಂಕ 20–11–2003ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಖಾಯಂ ಪೂರ್ವ ಸೇವಾವಧಿಯಲ್ಲಿಯೇ ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿರುತ್ತಾರೆ. ಸದರಿ ವೈದ್ಯರು ಖಾಯಂ ಪೂರ್ವ ಸೇವಾ ಅವಧಿಯಲ್ಲಿ ಅನಧಿಕೃತ ಗೈರುಹಾಜರಾಗಿ ಕರ್ತವ್ಯಚ್ಯುತಿ ಎಸಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ಖಾಯಂ ಪೂರ್ವ) ನಿಯಮಗಳು 1977ರ ನಿಯಮ 6(1)(2)ರ ಅಡಿಯಲ್ಲಿ ಸೇವೆಯಿಂದ ವಿಮೋಚನೆಗೊಳಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 684 ಹೆಚ್ಎಸ್ಹೆಚ್ 2007 ಬೆಂಗಳೂರು, ದಿನಾಂಕ: 23ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ: ಸಿ.ಎ. ಅಶ್ವಿನಿ, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೌಡ್ಲೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ, ಇವರು ದಿನಾಂಕ 20–11–2003 ರಿಂದ ಖಾಯಂ ಪೂರ್ವ ಸೇವಾವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಕರ್ತವ್ಯಚ್ಯುತಿ ಎಸಗಿರುವುದರಿಂದ ಸದರಿಯವರನ್ನು ದಿನಾಂಕ 20–11–2003 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಖಾಯಂಪೂರ್ವ) ನಿಯಮಾವಳಿ 1977ರ ನಿಯಮ 6(1)(2)ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 214

ಕೆ.ಎಸ್. ಸರೋಜಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಸೇವೆಗಳು–1)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಗುಡಿಬಂಡೆ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಯನ್ನು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿಗೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರ ಪತ್ರ ಸಂಖ್ಯೆ; ಆಡಳಿತ/ಸಿಬ್ಬಂದಿ/ಇ2/89/2007–08, ದಿನಾಂಕ: 29–9–2007.

ಪ್ರಸ್ತಾವನೆ :

ಮೇಲೆ ಓದಲಾದ ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು, ಇವರ ಪತ್ರದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು, ಡಾ: ನಂಜುಂಡಪ್ಪ ವರದಿಯಂತೆ ಹೆಚ್ಚು ಹಿಂದುಳಿದ ಹಾಗೂ ವಿಸ್ತೀರ್ಣದಲ್ಲಿ ದೊಡ್ಡದಾದ ತಾಲ್ಲೂಕಾಗಿದ್ದು, ಸರ್ಕಾರಿ ಆದೇಶ ಸಂ. ವಾಕೈ 13 ಸ್ವೀಮರ 97 (ಭಾಗ) ದಿ: 4–6–1999ರನ್ವಯ ಸರ್ಕಾರಿ ಸಿಬ್ಬಂದಿಯನ್ನು ಶೇ. 5ರಷ್ಟು ರದ್ದುಗೊಳಿಸುವುದರಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಖಾಲಿ ಇದ್ದ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಯನ್ನು ರದ್ದುಗೊಳಿಸಲಾಗಿದ್ದು, ನೂತನ ಜಿಲ್ಲೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯ ಅತೀ ಸಣ್ಣ ತಾಲ್ಲೂಕಾದ ಗುಡಿಬಂಡೆ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಯನ್ನು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿಗೆ ಸ್ಥಳಾಂತರಿಸುವಂತೆ ಅಪರ ನಿರ್ದೇಶಕರು (ಆಡಳಿತ) ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 210 ಕೈಸೇವಿ 2007, ಬೆಂಗಳೂರು, ದಿನಾಂಕ: 31ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಯನ್ನು ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಸಮೇತ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿಗೆ ಖಾಯಂ ಆಗಿ ಸ್ಥಳಾಂತರಿಸಿ ಆದೇಶಿಸಿದೆ ಹಾಗೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುವ ಕೈಗಾರಿಕಾ ವಿಸ್ತರಣಾಧಿಕಾರಿಯವರೇ ಗುಡಿಬಂಡೆ ತಾಲ್ಲೂಕಿನ ಕೆಲಸ–ಕಾರ್ಯಗಳನ್ನೂ ಸಹ ನಿರ್ವಹಿಸುವಂತೆ ಆದೇಶಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 215

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸಂಖ್ಯೆ: ಪಸಂಮೀ 217 ಪಸಸೇ 2007, ಬೆಂಗಳೂರು, ದಿನಾಂಕ 8ನೇ ಜನವರಿ 2008

ತಿದ್ದುಪಡಿ ಆದೇಶ

ರಾಜ್ಯದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳಲ್ಲಿ ನೂತನ ಪಶು ಚಿಕಿತ್ಸಾಲಯಗಳನ್ನು ಮತ್ತು ಸಂಚಾರಿ ಕ್ಲಿನಿಕ್‌ಗಳನ್ನು ಆರಂಭಿಸುವ ಕುರಿತಾದ ಸರ್ಕಾರಿ ಸಮಸಂಖ್ಯೆಯ ಆದೇಶದಲ್ಲಿನ ಅನುಬಂಧ–1ರ ಪಟ್ಟಿಯಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಮಾಡಿರುವಂತೆ ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಆದೇಶದಲ್ಲಿನ ಕ್ರಮ ಸಂಖ್ಯೆ	ದಿನಾಂಕ 31–8–2007ರ ಸರ್ಕಾರಿ ಆದೇಶದ ಪಟ್ಟಿಯಲ್ಲಿರುವುದು	ತಿದ್ದುಪಡಿ ಮಾಡಿರುವುದು
1	2	3	4
1	09	ದೊಡ್ಡಬಳ್ಳಾಪುರ ತಾಲ್ಲೂಕು, ರೈಲ್ವೆ ಗೊಲ್ಲಹಳ್ಳಿ	ನೆಲಮಂಗಲ ತಾಲ್ಲೂಕು, ರೈಲ್ವೆ ಗೊಲ್ಲಹಳ್ಳಿ
2	43	ಹೊಳೆನರಸೀಪುರ ತಾಲ್ಲೂಕು, ಅಗ್ರಹಾರಗೇಟ್	ಹಾಸನ ನಗರ, ಕೆ.ಆರ್.ಪುರಂ ಬಡಾವಣೆ
3	90	ಹುಬ್ಬಳ್ಳಿ ತಾಲ್ಲೂಕು, ಶೇರವಾಡ	ಹುಬ್ಬಳ್ಳಿ ತಾಲ್ಲೂಕು, ಶೆರೆವಾಡ
4	102	ಪಾವಗಡ ತಾಲ್ಲೂಕು, ರಾಯದಗುಂಟೆ	ಪಾವಗಡ ತಾಲ್ಲೂಕು, ನ್ಯಾಯದಗುಂಟೆ
5	104	ತುರುವೇಕೆರೆ ತಾಲ್ಲೂಕು ಬಿಗನೇಹಳ್ಳಿ	ತುರುವೇಕೆರೆ ತಾಲ್ಲೂಕು ಬಿಗನೇನಹಳ್ಳಿ
6	78	ಗಂಗಾವತಿ ತಾಲ್ಲೂಕು, ಬಸವನಾಳ–ಬಿ ಕ್ಯಾಂಪ್	ಗಂಗಾವತಿ ತಾಲ್ಲೂಕು, ಬಸವಣ್ಣ ಕ್ಯಾಂಪ್
7	129	ಗೋಕಾಕ್ ತಾಲ್ಲೂಕು, ಮುಸಗುಪ್ಪ	ಚಿಕ್ಕೋಡಿ ತಾಲ್ಲೂಕು, ಹುನ್ನರಗಿ ಗ್ರಾಮ
8	106	ಹಾವೇರಿ ತಾಲ್ಲೂಕು, ಮಾರನಬೀಡಾ	ಹಾನಗಲ್ ತಾಲ್ಲೂಕು ಮಾರನಬೀಡ
9	107	ಹಾವೇರಿ ತಾಲ್ಲೂಕು, ಕೆಲವರಕೊಪ್ಪ	ಹಾನಗಲ್ ತಾಲ್ಲೂಕು, ಕೆಲವರಕೊಪ್ಪ
10	110	ಅಫಜಲ್‌ಪುರ ತಾಲ್ಲೂಕು, ಫತರಗಾ ಹೆರಿಸೂರು	ಅಫಜಲ್‌ಪುರ ತಾಲ್ಲೂಕು, ಫತ್ತರಗಾ
11	119	ಕಣ್ಣೂರ ತಾಲ್ಲೂಕು, ಕಣ್ಣೂರ	ಗುಲ್ಬರ್ಗಾ ತಾಲ್ಲೂಕು, ಕಣ್ಣೂರು
12	120	ಗುಂಡ್ಲುಪೇಟೆ ತಾಲ್ಲೂಕು, ಸೋಮನಹಳ್ಳಿ	ಗುಂಡ್ಲುಪೇಟೆ ತಾಲ್ಲೂಕು, ಚಿಕ್ಕಾಟಿ,
13	52	ವಿಜಾಪುರ ತಾಲ್ಲೂಕು, ಹಡಗಲಿ	ವಿಜಾಪುರ ತಾಲ್ಲೂಕು, ಕಾರಜೋಳ

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 93

ಎಂ.ಪಿ. ನಾಗರಾಜ

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ–ಎ)

ಸಂಖ್ಯೆ: ಪಸಂಮೀ 170 ಪಸಸೇ 2006, ಬೆಂಗಳೂರು, ದಿನಾಂಕ 22ನೇ ಅಕ್ಟೋಬರ್ 2007

ತಿದ್ದುಪಡಿ

ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ 1–3–2007ರಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಮತ್ತು ಇತರ ಅವಶ್ಯಕ ಸ್ಥಳಗಳಲ್ಲಿ 69 ಪಶುಚಿಕಿತ್ಸಾಲಯಗಳನ್ನು ತೆರೆಯಲು ಸಹಮತಿ ನೀಡಿದ್ದು, ಸದರಿ ಸರ್ಕಾರಿ ಆದೇಶದಲ್ಲಿನ ಆದೇಶ ಭಾಗದ 3ನೇ ಪ್ಯಾರಾದಲ್ಲಿ ನಮೂದಿಸಿರುವುದನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿರುವಂತೆ ಓದಿಕೊಳ್ಳತಕ್ಕದ್ದು.

ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ 1–3–2007ರಲ್ಲಿ ನಮೂದಿಸಿರುವುದು	ತಿದ್ದುಪಡಿ ಮಾಡಿರುವುದು
ಮಂಜೂರು ಮಾಡಿರುವ ಪ್ರತೀ ಪಶು ಚಿಕಿತ್ಸಾಲಯಕ್ಕೆ ಒಂದು ಪಶುವೈದ್ಯಾಧಿಕಾರಿ ಹುದ್ದೆ, ಒಂದು ಪಶುವೈದ್ಯಕೀಯ ಪರೀಕ್ಷಕರ ಹುದ್ದೆ ಹಾಗೂ ಎರಡು ಡಿ–ದರ್ಜೆ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ. ಈ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲೂ ಸಹ ಸಹಮತಿ ನೀಡಲಾಗಿದೆ.	ಮಂಜೂರು ಮಾಡಿರುವ ಪ್ರತೀ ಪಶು ಚಿಕಿತ್ಸಾಲಯಕ್ಕೆ ಒಂದು ಪಶುವೈದ್ಯಾಧಿಕಾರಿ ಹುದ್ದೆ, ಒಂದು ಪಶುವೈದ್ಯಕೀಯ ಪರೀಕ್ಷಕರ ಹುದ್ದೆ ಹಾಗೂ ಎರಡು ಡಿ–ದರ್ಜೆ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ. ಈ ಹುದ್ದೆಗಳನ್ನು ನೇಮಕಾತಿ, ವರ್ಗಾವಣೆ, ಮುಂಬಡ್ತಿ ಮತ್ತು ನಿಯೋಜನೆ ಮೇಲೆ ಭರ್ತಿ ಮಾಡಿ ಕಾರ್ಯನಿರ್ವಹಿಸುವುದು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 94

ಎಂ.ಪಿ. ನಾಗರಾಜ

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಪಶುಸಂಗೋಪನೆ–ಎ)

ಒಳಾಡಳಿತ ಸಚಿವಾಲಯ

ಸಂಖ್ಯೆ: ಒಇ/122/ಪೊಸಿಅ/2000, ದಿನಾಂಕ 10ನೇ ಜನವರಿ 2008

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಒಇ 122 ಪೊಸಿಅ 2000, ದಿನಾಂಕ 16–6–2007ರ ಆದೇಶದ ಕಂಡಿಕೆ 2 ರಲ್ಲಿರುವ "ಅಮಾನತ್ತಿನ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆ" ಎಂಬುದರ ಬದಲಿಗೆ ಇವರು "ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಅವರು ಕರ್ತವ್ಯದ ಮೇಲಿದ್ದ ಅವಧಿಯೆಂದು" ಪರಿಗಣಿಸಿ ಆದೇಶಿಸಿದೆ ಎಂದು ಓದಿಕೊಳ್ಳತಕ್ಕದ್ದು.

ತಮ್ಮ ನಂಬುಗೆಯ,

ಪಿ.ಆರ್.95

ಆರ್.ಎ. ಕುಲಕರ್ಣಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಾರ್ಮಿಕ ಸಚಿವಾಲಯ

ವಿಷಯ : 2007–08ನೇ ಸಾಲಿನಲ್ಲಿ ರಾಜ್ಯದ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಸ್ಥಾಪಿಸಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಹುದ್ದೆಗಳ ಮಂಜೂರಾತಿ ಬಗ್ಗೆ.

ಓದಲಾಗಿದೆ:
1. ಪತ್ರ ಸಂಖ್ಯೆ ಉತನಿ/ತರಬೇತಿ/ಯೋ–1/ವಿವ–06/2007–08, ದಿ: 16–4–2007.
2. ಟಿಪ್ಪಣಿ ಸಂಖ್ಯೆ ಸಿಎಂ/ಎಸ್‌ಸಿಎಮ್–2/113/2007, ದಿ: 2–5–2007.
3. ಸರ್ಕಾರದ ಆದೇಶ ಸಂಖ್ಯೆ ಕಾಇ 141 ಇಟಿಐ 2007, ದಿ: 2–8–2007.
4. ಪತ್ರ ಸಂಖ್ಯೆ ಉತನಿ/ತರಬೇತಿ/ಯೋ–01/ವಿವ–11/2007–08, ದಿ: 16–8–2007.
5. ಸರ್ಕಾರಿ ಆದೇಶ ಸಂ: ಕಾಇ 376 ಇಟಿಐ 2007 (ಭಾಗ) ದಿ: 5–11–2007.

ಪ್ರಸ್ತಾವನೆ :

ಪ್ರಾದೇಶಿಕ ಅಸಮತೋಲನತೆ ನೀಗಿಸಲು ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವುದಾಗಿ 2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿತ್ತು.

ಆಯುಕ್ತರು, ಉದ್ಯೋಗ ಮತ್ತು ತರಬೇತಿ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ರಾಜ್ಯದ ಅತಿ ಹಿಂದುಳಿದ ತಾಲ್ಲೂಕುಗಳ ಪೈಕಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಈಗಾಗಲೇ ಇಲ್ಲದಿರುವ ತಾಲ್ಲೂಕುಗಳಲ್ಲಿ ಹತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಿಗೆ ಅವಶ್ಯಕ ಹುದ್ದೆಗಳನ್ನು ಸೃಜಿಸುವಂತೆ, ವೃತ್ತಿಗಳನ್ನು ಮಂಜೂರು ಮಾಡುವಂತೆ ಹಾಗೂ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿ: 2–5–2007ರಂದು ಜರುಗಿದ ಸಭೆಯಲ್ಲಿನ ತೀರ್ಮಾನದಂತೆ ಡಾ: ಡಿ.ಎಂ. ನಂಜುಂಡಪ್ಪ ವರದಿ ಅನುಷ್ಠಾನಗೊಳಿಸಲು 2007–08ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಪ್ರಾದೇಶಿಕ ಅಸಮತೋಲನಾ ಯೋಜನೆಯಡಿಯಲ್ಲಿ 10 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ತೀರ್ಮಾನಿಸಿ ಸದ್ಯಕ್ಕೆ ಅಫ್ಜಲ್‌ಪುರ, ಹಿರಿಯೂರು, ಮುಳಬಾಗಿಲು, ದೇವದುರ್ಗ, ನಾಗಮಂಗಲ, ಬೇಲೂರು, ಶ್ರೀರಂಗಪಟ್ಟಣ ಮತ್ತು ಬಸವಕಲ್ಯಾಣಗಳಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಉಲ್ಲೇಖಿತ (3)ರ ಸರ್ಕಾರಿ ಆದೇಶದಲ್ಲಿ ಅನುಮತಿ ನೀಡಲಾಗಿದೆ.

ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರು ಮೇಲೆ (4)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಮೇಲ್ಕಂಡ 08 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ವೃತ್ತಿಗಳನ್ನು ಮತ್ತು ಸೂಕ್ತ ಸಿಬ್ಬಂದಿಯನ್ನು ಮಂಜೂರು ಮಾಡುವಂತೆ ಮತ್ತೊಮ್ಮೆ ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ (5)ರಲ್ಲಿ ಹೊರಡಿಸಲಾದ ಆದೇಶದಲ್ಲಿ ರಾಜ್ಯದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯಡಿ 2007–08ನೇ ಸಾಲಿನಲ್ಲಿ ಅತೀ ಹಿಂದುಳಿದ 8 ತಾಲ್ಲೂಕುಗಳಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸದ್ಯಕ್ಕೆ ಕೆಳಕಂಡ 5 ವೃತ್ತಿಗಳನ್ನು ಪ್ರಾರಂಭಿಸಲು ಮಂಜೂರಾತಿಯನ್ನು ನೀಡಲಾಗಿತ್ತು.

ಕ್ರ. ಸಂ.	ಪ್ರತಿ ಸಂಸ್ಥೆಯಲ್ಲಿ ಪ್ರಾರಂಭಿಸಲಾಗುವ ವೃತ್ತಿಗಳು
1	ಎಲೆಕ್ಟ್ರೀಷಿಯನ್
2	ಎಲೆಕ್ಟ್ರಾನಿಕ್ ಮೆಕಾನಿಕ್
3	ಫಿಟ್ಟರ್
4	ಟರ್ನರ್
5	ಎಂ.ಎಂ.ವಿ.

ಕ್ರಮ ಸಂಖ್ಯೆ: 4ರಲ್ಲಿ ಓದಲಾದ ಆಯುಕ್ತರು, ಉದ್ಯೋಗ ಮತ್ತು ತರಬೇತಿ, ಬೆಂಗಳೂರುರವರು ಕೋರಿರುವಂತೆ ಮೇಲ್ಕಂಡ 8 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಹೊಸ ಹುದ್ದೆಗಳನ್ನು ಸೃಜಿಸುವ ವಿಷಯವನ್ನು ಪರಿಶೀಲಿಸಿದ ನಂತರ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಾಇ 376 ಇಟಿಐ 2007, ಬೆಂಗಳೂರು, ದಿನಾಂಕ: 8ನೇ ಜನವರಿ 2008.

ರಾಜ್ಯದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯಡಿ 2007–08ನೇ ಸಾಲಿನಲ್ಲಿ ಅತೀ ಹಿಂದುಳಿದ ತಾಲ್ಲುಕುಗಳಲ್ಲಿ ಹೊಸದಾಗಿ ಸ್ಥಾಪಿಸಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಾದ ಅಫ್ಜಲ್‌ಪುರ, ಹಿರಿಯೂರು, ಮುಳಬಾಗಿಲು, ದೇವದುರ್ಗಾ, ನಾಗಮಂಗಲ, ಬೇಲೂರು, ಶ್ರೀರಂಗಪಟ್ಟಣ ಮತ್ತು ಬಸವಕಲ್ಯಾಣಗಳಲ್ಲಿ ಈ ಕೆಳಕಂಡಂತೆ ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೃಜಿಸಲು ಮಂಜೂರಾತಿಯನ್ನು ನೀಡಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಪ್ರತಿ ಸಂಸ್ಥೆಗೆ ಸೃಜಿಸಲಾದ ಹುದ್ದೆಗಳ ಸಂಖ್ಯೆ	ಒಟ್ಟು ಸಂಸ್ಥೆಗಳು	ಒಟ್ಟು ಮಂಜೂರಾದ ಹುದ್ದೆಗಳು
1	ಪ್ರಾಚಾರ್ಯರು (ದರ್ಜೆ–1)	1	8	8
2	ತರಬೇತಿ ಅಧಿಕಾರಿ	1	8	8
3	ಆಡಳಿತ ಸಹಾಯಕರು	1	8	8
4	ಕಿರಿಯ ತರಬೇತಿ ಅಧಿಕಾರಿ	10	8	80
5	ಕಛೇರಿ ಅಧೀಕ್ಷಕರು	1	8	8
6	ಪ್ರಥಮ ದರ್ಜೆ ಸಹಾಯಕರು	2	8	16
7	ದ್ವಿತೀಯ ದರ್ಜೆ ಸಹಾಯಕರು	1	8	8
8	ಬೆರಳಚ್ಚುಗಾರರು	1	8	8
9	ಕಾರ್ಯಾಗಾರ ಸಹಾಯಕರು	5	8	40
10	ಗ್ರೂಪ್–ಡಿ	3	8	24
	ಒಟ್ಟು	**26**		**208**

ಮೇಲೆ ತಿಳಿಸಿರುವಂತೆ ಒಂದು ತರಬೇತಿ ಸಂಸ್ಥೆಗೆ 26 ಹುದ್ದೆಗಳಂತೆ ಒಟ್ಟು 8 ತರಬೇತಿ ಸಂಸ್ಥೆಗಳಿಗೆ 208 ಹುದ್ದೆಗಳನ್ನು (8x26=208) ಅಂದರೆ ಒಟ್ಟು ಇನ್ನೂರ ಎಂಟು ಹುದ್ದೆಗಳನ್ನು ಮಾತ್ರ ಸೃಜಿಸಲು ಮಂಜೂರಾತಿ ನೀಡಲಾಗಿದೆ. ಅಲ್ಲದೆ, ಗ್ರೂಪ್–ಡಿ ಹುದ್ದೆಗೆ ಸಂಬಂಧಿಸಿದ ಹುದ್ದೆಗಳನ್ನು ಬಾಹ್ಯ ಮೂಲಗಳಿಂದ ತುಂಬಲು ಸೂಚಿಸಲಾಗಿದೆ.

ಈ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ "2230–03–101–0–37–500 lump sum"ಅಡಿ ಭರಿಸಲು ಮಂಜೂರಾತಿ ನೀಡಲಾಗಿದೆ.

ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 724 ವೆಚ್ಚ–9/07, ದಿನಾಂಕ 02–1–2008ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಭಾರತ ಸರ್ಕಾರದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.82

ಜಿ.ಎಸ್. ಲಕ್ಷ್ಮೀಪತಿ
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯ ತರಬೇತಿ ಕೇಂದ್ರಗಳನ್ನು, ಗದಗ ಮತ್ತು ಹಾವೇರಿ ಹಾಗೂ ಹೊಸ ಜಿಲ್ಲೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ತೆರೆಯುವ ಬಗ್ಗೆ.

ಉಲ್ಲೇಖ : ದಿನಾಂಕ 9ನೇ ಅಕ್ಟೋಬರ್ 2007ರಂದು ನಡೆದ ಯೋಜನಾ ಚಾಲನಾ ಸಮಿತಿಯ 2ನೇ ಸಭೆಯ ನಡವಳಿಗಳು.

ಪ್ರಸ್ತಾವನೆ :

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಲ್ಲಿ ಸೇವಾ ಅಭಿವೃದ್ಧಿ ಸ್ಪರ್ಧಾತ್ಮಕ ನಿಧಿಯು (SICF) ಒಂದು ಮುಖ್ಯ ಅಂಶವಾಗಿದ್ದು ಜನತೆಗೆ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಕಲ್ಪಿಸುವುದು ಇದರ ಗುರಿಯಾಗಿರುತ್ತದೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ರಾಜ್ಯದ ಯೋಜನೆಯಡಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕೆ ವಿಶ್ವ ಬ್ಯಾಂಕಿನ ಅನುಮೋದನೆಯೂ ಸಹ ದೊರೆತಿದೆ. ಸದ್ಯಕ್ಕೆ ಕರ್ನಾಟಕ ರಾಜ್ಯದ ಒಟ್ಟು 19 ಜಿಲ್ಲೆಗಳಲ್ಲಿ ಅಂದರೆ, (1) ಬೆಂಗಳೂರು ನಗರ, (2) ತುಮಕೂರು, (3) ಚಿತ್ರದುರ್ಗ, (4) ಶಿವಮೊಗ್ಗ, (5) ಕೋಲಾರ, (6) ಮಂಡ್ಯ, (7) ಮೈಸೂರು, (8) ಕೊಡಗು, (9) ಮಂಗಳೂರು, (10) ಹಾಸನ, (11) ಚಿಕ್ಕಮಗಳೂರು, (12) ಕಾರವಾರ, (13) ಗುಲ್ಬರ್ಗಾ, (14) ಧಾರವಾಡ, (15) ಬಿಜಾಪುರ, (16) ಬೀದರ್, (17) ರಾಯಚೂರು, (18) ಬಳ್ಳಾರಿ ಹಾಗೂ (19) ಬೆಳಗಾಂಗಳಲ್ಲಿ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳು ಈಗಾಗಲೇ ನಡೆಯುತ್ತಿವೆ.

ಸದರಿ ಕೇಂದ್ರಗಳಲ್ಲಿ 18 ತಿಂಗಳಿಗೊಮ್ಮೆ ಒಟ್ಟು 600 ಅಭ್ಯರ್ಥಿಗಳು ಮಾತ್ರ ತರಬೇತಿಯನ್ನು ಪಡೆದು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳಿಗೆ ಅರ್ಹತೆಯುಳ್ಳವರಾಗಿರುತ್ತಾರೆ. ಅದರ ಜೊತೆಗೆ ಪ್ರತಿ ವರ್ಷವೂ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು, ಸೇವೆಯಿಂದ ವಯೋನಿವೃತ್ತಿ ಆಗುವುದರಿಂದ ಆ ಹುದ್ದೆಗಳೂ ಸಹ ಭರ್ತಿ ಆಗದೆ ಉಳಿಯುತ್ತಿವೆ.

ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸುಮಾರು 1067 ಕಿರಿಯ ಮಹಿಳಾ ಆರೋಗ್ಯ ಸಹಾಯಕಿ ಹುದ್ದೆಗಳು ಖಾಲಿ ಇದ್ದು, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಭರ್ತಿಯಾಗದೇ ಇದ್ದುದರಿಂದ ಇಲಾಖೆಯ ಆರೋಗ್ಯ ಸೇವೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ವ್ಯತ್ಯಯ ಉಂಟಾಗಿದೆ. ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿಯು ಸಹ ಕುಂಠಿತವಾಗಿದೆ. ಇದಲ್ಲದೇ ಎನ್‌ಆರ್‌ಎಚ್‌ಎಂ ಕಾರ್ಯಕ್ರಮದಡಿಯಲ್ಲಿಯೂ ಸಹ ಪ್ರತಿ ಉಪ ಕೇಂದ್ರಕ್ಕೆ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹೆಚ್ಚುವರಿಯಾಗಿ ಬೇಕಾಗಿದೆ. ಹುದ್ದೆಗಳ ಅವಶ್ಯಕತೆ ಇರುತ್ತದೆ.

ಇದನ್ನು ಗಮನಿಸಿ ಯೋಜನಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿಯವರು ಹಿಂದುಳಿದ ಜಿಲ್ಲೆಗಳಾದ ಗದಗ, ಹಾವೇರಿ ಮತ್ತು ಹೊಸದಾಗಿ ಸೃಷ್ಠಿಸಿದ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪ ಮಾಡಲಾಗಿದೆ.

ಇದನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಎಚ್‌ಎಫ್‌ಡಬ್ಲ್ಯೂ/ಕೆಎಚ್‌ಎಸ್‌ಡಿಆರ್‌ಪಿ/ಎಸ್‌ಐಸಿಟಿ/55/2007,
ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್ 2007.

ಮೇಲೆ ತಿಳಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಗಳಾದ ಗದಗ, ಹಾವೇರಿ ಮತ್ತು ಹೊಸದಾಗಿ ಸೃಜಿಸಲಾದ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸರ್ಕಾರಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಈ ಮೂಲಕ ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿದೆ.

ಭಾರತದ ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 83

ಸರ್ಕಾರದ ಉಪ ಕಾರ್ಯದರ್ಶಿ,
ಕೆಹೆಚ್‌ಎಸ್‌ಡಿಆರ್‌ಪಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ
ಸಂಖ್ಯೆ: ಕಸಂವಾಪ್ರ 41 ಕೆಬಿಎಲ್ 2007, ಬೆಂಗಳೂರು, ದಿನಾಂಕ 7ನೇ ಜನವರಿ 2008
ತಿದ್ದೋಲೆ

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 41 ಕೆಬಿಎಲ್ 2007 ದಿನಾಂಕ 17–11–2007ರಲ್ಲಿನ ಆದೇಶ ಭಾಗದ ಎರಡನೇ ಕಂಡಿಕೆಯ ಲೆಕ್ಕಶೀರ್ಷಿಕೆಯನ್ನು "2205–00–002–01–81–059 (ಯೋಜನೆ)" ಎಂಬುದಕ್ಕೆ ಬದಲಾಗಿ "2205–00–102–1–81–059 (ಯೋಜನೆ)" ಎಂದು ದಿನಾಂಕ 17–11–2007ರಿಂದಲೇ ಜಾರಿಗೆ ಬರುವಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 84

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 2007–2008ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ ಬಾಗಲಕೋಟೆ, ಬಳ್ಳಾರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022: 1: 2007 ಎಸ್‌ಜಿಎಸ್‌ವೈ (10) ದಿನಾಂಕ 2–4–2007 ಮತ್ತು (36) ದಿನಾಂಕ 4–6–2007.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಎಸ್‌ಜೆವೈ 2007, ಬೆಂಗಳೂರು, ದಿನಾಂಕ 18–5–2007 ಮತ್ತು 10–8–2007.
3. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022: 1: 2007, ಎಸ್‌ಜಿಎಸ್‌ವೈ–I(85) ದಿನಾಂಕ 27–11–2007.

ಪ್ರಸ್ತಾವನೆ :

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೇಲೆ ಓದಲಾದ (1) ಮತ್ತು (2)ರಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) 2007–08ನೇ ಸಾಲಿನ ಒಂದನೇ ಕಂತಿನ ಅನುದಾನ ರೂ. 33,90,66,000 ಹಾಗೂ 11,30,22,000ಗಳನ್ನು ಅನುಕ್ರಮವಾಗಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿವೆ.

ಕೇಂದ್ರ ಸರ್ಕಾರವು ಓದಲಾಗಿದೆ (3)ರಲ್ಲಿ ಬಾಗಲಕೋಟೆ, ಬಳ್ಳಾರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 3,80,78,000ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಎರಡನೇ ಕಂತಿನ ಹಣ ರೂ. 1,26,93,000 (ರೂ. ಒಂದು ಕೋಟಿ ಎಪ್ಪತ್ತಾರು ಲಕ್ಷದ ತೊಂಬತ್ತಮೂರು ಸಾವಿರ ಮಾತ್ರ)ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ ರಾಜ್ಯದ ಆಯವ್ಯಯದಲ್ಲಿ ಬಾಗಲಕೋಟೆ ಮತ್ತು ಬಳ್ಳಾರಿ ಜಿಲ್ಲಾ ಪಂಚಾಯತಿಗಳಿಗೆ ಅನುದಾನದ ಕೊರತೆಯಿರುವ ಕಾರಣ ಲಭ್ಯವಿರುವಷ್ಟು ಹಾಗೂ ಧಾರವಾಡ ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ಪೂರ್ಣವಾಗಿ ಬಿಡುಗಡೆಗೊಳಿಸಿ ರೂ. 97,67,000 (ರೂ. ತೊಂಬತ್ತೇಳು ಲಕ್ಷದ ಅರವತ್ತೇಳು ಸಾವಿರ ಮಾತ್ರ) ಮಾತ್ರ ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ:

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 21 ಎಸ್‌ಜೆವೈ 2007, ಬೆಂಗಳೂರು, ದಿನಾಂಕ: 7ನೇ ಜನವರಿ 2008.

ರಾಜ್ಯ ಸರ್ಕಾರವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಬಾಗಲಕೋಟೆ, ಬಳ್ಳಾರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 97,67,000 (ರೂ. ತೊಂಬತ್ತೇಳು ಲಕ್ಷದ ಅರವತ್ತೇಳು ಸಾವಿರ ಮಾತ್ರ)ಗಳನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

(ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಜಿಲ್ಲೆಗೆ ಲಭ್ಯವಿರುವ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ
1	ಬಾಗಲಕೋಟೆ	461	2900zz0001	78,47,000	26,16,000	17,78,000	17,78,000
2	ಬಳ್ಳಾರಿ	418	3400zz0001	1,87,94,000	62,65,000	41,77,000	41,77,000

3	ಧಾರವಾಡ	415	2500zz8798	42,72,000	14,24,000	14,98,000	14,24,000
4	ಶಿವಮೊಗ್ಗ	405	1400zz0002	71,65,000	23,88,000	29,92,000	23,88,000
			ಒಟ್ಟು	**3,80,78,000**	**1,26,93,000**	**1,04,45,000**	**97,67,000**

ಷರತ್ತುಗಳು:

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದಲ್ಲಿ ನಡುವೆ 75:25ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕಶೀರ್ಷಿಕೆ 2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6–ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2007–2008 (2501–01–198–6–01) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜಡ್‌ಪಿಎ 2003 ದಿನಾಂಕ 14–7–2005ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 14 ಎಸ್‌ಜೆವೈ 2007 ದಿನಾಂಕ 18–4–2007ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2007–2008ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಆಯಾ ಮಾಹೆಯ ಪ್ರಗತಿ ವರದಿಯನ್ನು ಮುಂದಿನ ತಿಂಗಳ 7ನೇ ತಾರೀಖಿನೊಳಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ: ಗ್ರಾಅಪ 513 ಪಿಬಿಎಸ್ 2007 ದಿನಾಂಕ 1–1–2008ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 87

ಬಿ.ಎನ್. ಕೃಷ್ಣಯ್ಯ
ನಿರ್ದೇಶಕರು, (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಅಪರ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

HORTICULTURE SECRETARIAT

Sub : "Scheme for Integrated Farming in Coconut for Productivity/Improvement with Coconut Development Board Assistance (100% CDB)" –Release of State share

Read :
1. G.O. No. ಕೃತೋಇ 66 ತೋಯೋಕಾ 2007 ದಿ: 23–4–2007.
2. Coconut Development Board's Letter No. 505/2006-Dev/(Karnataka) dtd: 14-12-2007.
3. Director of Horticulture's Letter No. DH/PC/AHO-2/4/07-08/1635 dated 21-9-2007.

Preamble:

The State Government had accorded sanction for implementation of the "Scheme for Integrated Farming in Coconut for Productivity/ Improvement with Coconut Development Board Assistance (100% CDB)", Head of account 2401-00-108-2-35 with an Outlay of Rs. 3.25 lakhs, as an ongoing scheme during the year 2007-2008, subject to the programmes to be sanctioned by Coconut Development Board and release of 100% funds by the Coconut Development Board vide Government Order read at (1) above.

2. Coconut Development Board has released an amount of Rs. 3.125 lakhs towards the Coconut Development Board's full share for implementation of the scheme "Production and distribution planting material –TxD seedlings" vide letter read at (2) above. This has been on 50:50 basis.

3. The Director of Horticulture has requested that since the production of TXD coconut seedlings is a season bound programme, State Level Administrative Approval may be given for implementation of the said programmed under the Head of Account 2401-00-108-02-35 during 2007-08 for a total amount of Rs. 6.25 lakhs (50% Coconut Development Board and 50% State) and he has also requested to release the funds vide his letter read at (3) above.

4. The proposal of the Director of Horticulture has been discussed in the MMR meeting held on 31-12-2007 in presence of the representative of the Finance Department. It was decided to accord State Level Administrative Approval for implementation of the said programme under the Head of Account 2401-00-108-02-35 during 2007-08 and release the funds available under the Head of Account.

5. Hence, this order.

Government Order No. AHD 145 HPP 2007, Bangalore, Dated 7th January 2008

Government is pleased to accord State Level Administrative Approval for implementation of the scheme "Production and distribution planting material –TxD seedling" under the Head of Account 2401-00-108-02-35 during 2007-08 at total cost of Rs. 6.25 lakhs (Rupees Six Lakhs and Twenty Five Thousand Only) on 50:50 basis between Coconut Development Board and the State.

An amount of Rs. 3.25 Lakhs (Rupees Three Lakhs and Twenty Five Thousand Only) is here by released.

By order and in the name of the President of India,

PR. 90

S. RAJU

Under Secretary to Government,

Horticulture Department.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ.ಜಿ. ಮಾಳೇಗೇರ್, ನಿವೃತ್ತ ಮುಖ್ಯ ಇಂಜಿನಿಯರ್, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ನೇಮಕಗೊಂಡ ಮಂಡನಾಧಿಕಾರಿಯವರನ್ನು ಬದಲಾಯಿಸುವ ಬಗ್ಗೆ –ಆದೇಶ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 85 ಎಸ್‌ಇಎನ್ 98, ದಿನಾಂಕ 24–7–2007.

2. ಸೂಪರಿಂಟೆಂಡೆಂಟ್ ಇಂಜಿನಿಯರ್ ಕೇಂದ್ರ ಯಾಂತ್ರಿಕ ಸಂಸ್ಥೆ, ಧಾರವಾಡ, ಇವರ ಪತ್ರ ಸಂಖ್ಯೆ: ಸೂಇಂ. ಕೇಯಾಸಂ:ಸಿ–1: ಇಲಾಖಾ ವಿಚಾರಣೆ 2007–08: 462, ದಿನಾಂಕ 16–9–2007.

ಪ್ರಸ್ತಾವನೆ :

ಕ್ರ.ಸಂ. (1)ರಲ್ಲಿ ಓದಲಾದ ಪತ್ರದ ಆದೇಶದಲ್ಲಿ ಶ್ರೀ ಬಿ.ಜಿ. ಮಾಳೇಗೇರ್, ನಿವೃತ್ತ ಮುಖ್ಯ ಇಂಜಿನಿಯರ್, ಇವರ ವಿರುದ್ಧ ವಿಚಾರಣೆ ನಡೆಸಲು ಪ್ರಾದೇಶಿಕ ಆಯುಕ್ತರು, ಬೆಳಗಾಂ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕಾರ್ಯಪಾಲಕ ಅಭಿಯಂತರರು, ವಾಲ್ಮಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರ.ಸಂ. (2)ರಲ್ಲಿ ಓದಲಾದ ಸೂಪರಿಂಟೆಂಡೆಂಟ್ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ಧಾರವಾಡ ಇವರ ಪತ್ರದಲ್ಲಿ ತಮಗೆ ಮುಖ್ಯ ಇಂಜಿನಿಯರ್ ಹುದ್ದೆಗೆ ಪದೋನ್ನತಿ ನೀಡಿ ಕಾಡಾ, ಶಿವಮೊಗ್ಗ, ಈ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿರುವುದರಿಂದ ವಿಚಾರಣೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ತಮ್ಮ ಬಳಿ ಇದ್ದು ಅವುಗಳನ್ನು ಬೇರೆಯವರಿಗೆ ಹಸ್ತಾಂತರಿಸಲು ಸೂಕ್ತ ಆದೇಶ ನೀಡುವಂತೆ ವಿನಂತಿಸಿರುತ್ತಾರೆ. ಹಾಗೂ ಕಾರ್ಯಪಾಲಕ ಅಭಿಯಂತರರು ವಾಲ್ಮಿ ಈ ಹುದ್ದೆಯು 2002ನೇ ಸಾಲಿನವರೆಗೆ ಮಾತ್ರ ಕಾರ್ಯ ನಿರ್ವಹಿಸಿದ್ದು ನಂತರ ಈ ಹುದ್ದೆಯನ್ನು ಮುಂದುವರಿಸಿಲ್ಲವೆಂದು ತಿಳಿಸಿ ಈ ಬಗ್ಗೆ ಸೂಕ್ತ ಆದೇಶ ನೀಡಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 85 ಎಸ್‌ಇಎನ್ 98, ಬೆಂಗಳೂರು, ದಿನಾಂಕ: 29ನೇ ಡಿಸೆಂಬರ್ 2007.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶ್ರೀ ಬಿ.ಜಿ. ಮಾಳಿಗೇರ್, ನಿವೃತ್ತ ಮುಖ್ಯ ಇಂಜಿನಿಯರ್ ಇವರ ವಿರುದ್ಧ ನಡೆಯುವ ವಿಚಾರಣೆಗೆ ಮಂಡನಾಧಿಕಾರಿಯಾಗಿ ಕಾರ್ಯಪಾಲಕ ಇಂಜಿನಿಯರ್, ವಾಲ್ಮಿ ಇವರನ್ನು ನೇಮಿಸಿದ್ದ ಆದೇಶವನ್ನು ರದ್ದುಪಡಿಸಿ ಅವರ ಬದಲಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11(5)ರನ್ವಯ ಸೂಪರಿಂಟೆಂಡೆಂಟ್ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ವೃತ್ತ, ಧಾರವಾಡ,

ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ. ಹಾಗೂ ಹಿಂದಿನ ಸೂಪರಿಂಟೆಂಡೆಂಟ್ ಇಂಜಿನಿಯರ್ ಕೇಂದ್ರ ಯಾಂತ್ರಿಕ ಸಂಸ್ಥೆ ಇವರಿಂದ ಎಲ್ಲಾ ದಾಖಲೆಗಳನ್ನು ತಕ್ಷಣ ಪಡೆಯುವಂತೆ ನಿರ್ದೇಶಿಸಿದೆ.

ವಿಚಾರಣಾಧಿಕಾರಿಯವರು 3 ತಿಂಗಳೊಳಗಾಗಿ ವಿಚಾರಣೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಿದೆ.

ಭಾರತ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 52

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವೆಗಳು–3)

ಸಂಖ್ಯೆ: ಸಿಆಸುಇ 261 ಕೆಇವಿ 07, ಬೆಂಗಳೂರು, ದಿನಾಂಕ: 4ನೇ ಜನವರಿ 2008

ತಿದ್ದುಪಡಿ

ದಿನಾಂಕ 17–9–07ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 064 ಎಸ್‌ಇಎನ್ 04ರ ಆದೇಶ ಭಾಗದ ಮೊದಲನೇ ಸಾಲಿನಲ್ಲಿ ಇರುವ "ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ" ವಾಕ್ಯದ ನಂತರ "ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 ಹಾಗೂ" ಎಂದು ಸೇರ್ಪಡೆಗೊಳಿಸಿ ಓದಿಕೊಳ್ಳುವುದು.

ಭಾರತ ರಾಷ್ಟ್ರಪತಿಯವರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 59

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–2)

ಸಹಕಾರ ಸಚಿವಾಲಯ

ವಿಷಯ : ಹಳಿಯಾಳ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ., ಹಳಿಯಾಳ ಇದರ 2005–06ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ನಡೆಸಲು ಅವಧಿ ವಿಸ್ತರಣೆ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶದ ಸಂಖ್ಯೆ ಸಿಒ 132 ಸಿಎಲ್‌ಎಂ 2007 ದಿನಾಂಕ 25–6–2007.

2. ಸಹಕಾರ ಸಂಘಗಳ ನಿಬಂಧಕರು ಇವರ ಪತ್ರ ಸಂಖ್ಯೆ: ಯುಬಿಸಿ–5/ಜಿಬಿಎಂ/ 26/2007–08 ದಿನಾಂಕ 26–11–2007.

ಪ್ರಸ್ತಾವನೆ :

ಹಳಿಯಾಳ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ., ಹಳಿಯಾಳ ಬ್ಯಾಂಕಿನ 2005–06ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ದಿನಾಂಕ 30–9–2007ರೊಳಗೆ ಕಾಲಾವಕಾಶ ನೀಡಿ ಅವಧಿ ವಿಸ್ತರಿಸಲಾಗಿದೆ. ಸದರಿ ಬ್ಯಾಂಕಿನ ಕಾರ್ಯಕ್ಷೇತ್ರವಾಗಿರುವ ದಾಂಡೇಲಿ ಮತ್ತು ಹಳಿಯಾಳ ಪಟ್ಟಣಗಳ ಪಟ್ಟಣ ಪಂಚಾಯಿತಿ ಮತ್ತು ನಗರ ಸಭೆ ಚುನಾವಣೆಗಳು ದಿನಾಂಕ 28–9–2007ರಂದು ಮತ್ತು ಮತಗಳ ಎಣಿಕೆಯು ದಿನಾಂಕ 30–9–2007ರಂದು ನಿಗದಿಪಡಿಸಿದ್ದು ಹಾಗೂ ಬ್ಯಾಂಕಿನ ಆಡಳಿತ ಸಮಿತಿಗೆ 31–12–2007ರೊಳಗಾಗಿ ಚುನಾವಣೆ ನಡೆಸಬೇಕಿರುವ ಹಿನ್ನೆಲೆಯಲ್ಲಿ ವಾರ್ಷಿಕ ಮಹಾಸಭೆ ಹಾಗೂ ಚುನಾವಣೆ ಏಕಕಾಲಕ್ಕೆ ಮಾಡಿದಲ್ಲಿ ಬ್ಯಾಂಕಿಗೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ ಎಂದು ತಿಳಿಸಿ ಸದರಿ ಬ್ಯಾಂಕಿನ 2005–06ನೇ ಸಾಲಿನ ಮಹಾಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರನ್ವಯ ದಿನಾಂಕ 31–12–2007ರೊಳಗೆ ನಡೆಸಲು ಅನುಮತಿ ಕೊಡುವಂತೆ ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 283 ಸಿಎಲ್‌ಎಂ 2007 ಬೆಂಗಳೂರು, ದಿನಾಂಕ: 31ನೇ ಡಿಸೆಂಬರ್ 2007.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಹಳಿಯಾಳ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ., ಹಳಿಯಾಳ ಇದರ 2005–06ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ನಡೆಸಲು ದಿನಾಂಕ 31–12–2007ರ ವರೆಗೆ ಕಾಲಾವಕಾಶ ನೀಡಲು ಅನುವಾಗುವಂತೆ ಸದರಿ ಸಂಘಕ್ಕೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 27(1)ರ ಉಪಬಂಧಗಳು ಕೆಳಗಿನ ಮಾರ್ಪಾಟಿನೊಂದಿಗೆ ಅನ್ವಯವಾಗುತ್ತದೆಂದು ನಿರ್ದೇಶಿಸುತ್ತದೆ ಎಂದರೆ:

27ರ ಪ್ರಕರಣದಲ್ಲಿ:

27ನೇ ಪ್ರಕರಣ ಉಪಪ್ರಕರಣ (1)ರ ಪರಂತುಕದಲ್ಲಿನ "ಆರು ತಿಂಗಳು" ಎಂಬ ಪದಗಳಿಗೆ ಬದಲಾಗಿ "ಹದಿನೈದು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ:

1. ಪ್ರಕರಣ 27(1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 31–12–2007ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ಕ್ಕೆ ಪ್ರಕರಣದ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು. ಹಾಗೂ ಇದನ್ನು ಯಾವುದೇ ಪೂರ್ವ ನಿದರ್ಶನವೆಂದು ಪರಿಗಣಿಸಬಾರದು.
2. ಸದರಿ ಬ್ಯಾಂಕಿನ 2006–07ನೇ ಸಾಲಿನ ಮಹಾಸಭೆಯನ್ನು ನಡೆಸಲು ದಿನಾಂಕ 31–12–2007ರವರೆಗೆ ಕಾಲಾವಕಾಶವನ್ನು ಸಂಬಂಧಪಟ್ಟ ರಿಜಿಸ್ಟ್ರಾರರಿಂದ ಬ್ಯಾಂಕು ಪಡೆಯತಕ್ಕದ್ದು.

ಭಾರತ ಸರ್ಕಾರದ ರಾಷ್ಟ್ರಪತಿಯವರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 58

ಆರ್.ಎಸ್. ಹುಚ್ಚಾಚಾರಿ

ವಿಶೇಷ ಕರ್ತವ್ಯಾಧಿಕಾರಿ ಮತ್ತು ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಆರ್. ಭಾಸ್ಕರ್ ಹಿರಿಯ ಸಹಾಯಕ, ಇವರ ಕಾರ್ಯನಿರ್ವಹಣಾ ವರದಿಯಲ್ಲಿ ದಾಖಲಾಗಿರುವ ಪ್ರತಿಕೂಲ ಷರಾದ ಬಗ್ಗೆ.

ಓದಲಾಗಿದೆ: 1. ದಿನಾಂಕ 24–7–2006ರ ತಿಳುವಳಿಕೆ ಪತ್ರ ಸಂಖ್ಯೆ: ಸಿಆಸುಇ 29 ವಾರವ 2006

2. ನೌಕರರ ಮೇಲ್ಮನವಿ ದಿ: 1–9–2006.

3. ಇದೇ ಸಂಖ್ಯೆಯ ದಿ: 6–7–2007ರ ಅನಧಿಕೃತ ಟಿಪ್ಪಣಿ

4. ಅ.ಟಿ. ಸಂಖ್ಯೆ: ಆಕುಕ/ಉಕಾ–1/68/2007, ದಿನಾಂಕ 11–12–2007.

ಪ್ರಸ್ತಾವನೆ :

ಶ್ರೀ ಆರ್. ಭಾಸ್ಕರ್, ಹಿರಿಯ ಸಹಾಯಕ ಇವರ 2005–06ನೇ ಸಾಲಿನ ಕಾರ್ಯನಿರ್ವಹಣಾ ವರದಿಯ ಭಾಗ–5ರಲ್ಲಿ ಅಂಗೀಕಾರ ಪ್ರಾಧಿಕಾರ ದಾಖಲಿಸಿರುವ ಈ ಕೆಳಕಂಡ ಪ್ರತಿಕೂಲ ಷರಾವನ್ನು ಕ.ಸಿ.ಸೇ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು, 2000ದ ನಿಯಮ 9(2)ರಂತೆ ಮೇಲೆ ಕ್ರಮ ಸಂಖ್ಯೆ 1ರಲ್ಲಿ ಓದಲಾದ ತಿಳುವಳಿಕೆ ಪತ್ರದಲ್ಲಿ ಈ ನೌಕರರಿಗೆ ತಿಳಿಸಲಾಗಿತ್ತು:

> "ಇವರ ನಿಷ್ಠೆ ಬಗ್ಗೆ ಸಂಶಯಾಸ್ಪದ, ದೂರಿನ ಹಿನ್ನೆಲೆಯಲ್ಲಿ ಇವರನ್ನು ಪ್ರಾಧಿಕಾರದಿಂದ ವರ್ಗಾವಣೆ ಸಹ ಮಾಡಲಾಗಿದೆ ಆದ್ದರಿಂದ, ನಿಷ್ಠೆ ಕುರಿತಂತೆ ವರದಿ/ಪುನರಾವಲೋಕನ ಷರಾ ನಾನು ಒಪ್ಪುವುದಿಲ್ಲ."

ಈ ಸಂಬಂಧದಲ್ಲಿ, ಈ ನೌಕರರು ಮೇಲೆ ಓದಲಾದ ಕ್ರಮಸಂಖ್ಯೆ–2ರಲ್ಲಿ ಸೂಚಿಸಿದ ಮೇಲ್ಮನವಿಯಲ್ಲಿ ಸದರಿ ಅವಧಿಯಲ್ಲಿನ ತಮ್ಮ ಕಾರ್ಯನಿರ್ವಹಣೆಯ ಬಗ್ಗೆ ವಿವರಣೆ ನೀಡಿ ತಮ್ಮ 2005–06ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿ ದಾಖಲಿಸಿರುವ ಪ್ರತಿಕೂಲ ಷರಾವನ್ನು ಕೈ ಬಿಡಲು ಕೋರಿದ್ದಾರೆ. ಈ ಮೇಲೆ ಹೇಳಿದ ನಿಯಮಗಳ ನಿಯಮ 10(2)ರ ಪ್ರಕಾರ ಈ ಕುರಿತು ಸಂಬಂಧಪಟ್ಟ ಅಂಗೀಕಾರ ಪ್ರಾಧಿಕಾರದ ಅಭಿಪ್ರಾಯವನ್ನು ಮೇಲೆ ಕ್ರ.ಸಂ. 3ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯ ಮೂಲಕ ಕೋರಲಾಗಿತ್ತು. ಅದರಂತೆ, ಮೇಲೆ ಓದಲಾದ ಕ್ರ.ಸಂ. 4ರಲ್ಲಿ ಸೂಚಿಸಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಮರ್ಥಿಸಿಕೊಂಡಿರುವ ಕಾರಣಗಳಿಂದಾಗಿ ಈಗಾಗಲೇ ಸದರಿ ವರದಿಯಲ್ಲಿ ಅಂಗೀಕಾರ ಪ್ರಾಧಿಕಾರವಾಗಿ ದಾಖಲಿಸಿದ ಈ ಮೇಲೆ ಹೇಳಿದ ಪ್ರತಿಕೂಲ ಷರಾಗಳಲ್ಲಿ ಯಾವುದೇ ಬದಲಾವಣೆ ಇಲ್ಲವೆಂದು ಸ್ಪಷ್ಟ ಅಭಿಪ್ರಾಯವನ್ನು ನೀಡಿದ್ದಾರೆ. ಈ ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 29 ವಾರವ 2006, ಬೆಂಗಳೂರು, ದಿನಾಂಕ: 1ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಾವಳಿಗಳು 2000ದ ನಿಯಮ 10(2)ರನ್ವಯ ಶ್ರೀ ಆರ್. ಭಾಸ್ಕರ್, ಹಿರಿಯ ಸಹಾಯಕ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರ 2005–06ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿ ಅಂಗೀಕಾರ ಪ್ರಾಧಿಕಾರ ದಾಖಲಿಸಿದ ಪ್ರತಿಕೂಲ ಷರಾ ಉಳಿದುಕೊಳ್ಳುತ್ತವೆ ಎಂದು ಈ ಮೂಲಕ ಆದೇಶಿಸಿದೆ.

ಭಾರತದ ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.102

ಸರ್ಕಾರದ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ವಸತಿ ಸಚಿವಾಲಯ

ವಿಷಯ : ನಿರ್ಮಲಜ್ಯೋತಿ 2ನೇ ಹಂತ–ಪೂರಕ ಆಯವ್ಯಯದಲ್ಲಿ ಹಣ ಒದಗಿಸುವ ಬಗ್ಗೆ.

ಓದಲಾಗಿದೆ: 1. ದಿನಾಂಕ 7–8–2007ರಂದು ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿ.

2. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಕೊನಿಮ/ಲೆಪಶಾ/ ಅನುದಾನ: ನಿಜ್ಯೋ: 2007–08, ದಿನಾಂಕ 6–9–2007.

3. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್‌ಡಿ 554 ವೆಚ್ಚ–9/07, ದಿ: 14–12–07.

ಪ್ರಸ್ತಾವನೆ :

ಮೇಲೆ ಉಲ್ಲೇಖ (1)ರಲ್ಲಿನಂತೆ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಮಲ್ ಜ್ಯೋತಿ 2ನೇ ಹಂತದ ಕಾರ್ಯಕ್ರಮಕ್ಕೆ ಅವಶ್ಯವಿರುವ ರೂ. 58.58 ಕೋಟಿ ಹಣವನ್ನು ಪೂರಕ ಆಯವ್ಯಯದಲ್ಲಿ ಒದಗಿಸಲು ಅಥವಾ ಹುಡ್ಕೋನಿಂದ ಸರ್ಕಾರದ ಖಾತರಿ ಮೇಲೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಸಾಲ ಪಡೆದು ಕೈಕೊಳ್ಳಲು ಆರ್ಥಿಕ ಇಲಾಖೆಯನ್ನು ಕೋರಲು ನಿರ್ಧರಿಸಲಾಯಿತು. ಅದರಂತೆ ಮೇಲಿನ ಉಲ್ಲೇಖ (2)ರಲ್ಲಿನಂತೆ ಆಯುಕ್ತರು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿರವರು ನಿರ್ಮಲ್ ಜ್ಯೋತಿ 2ನೇ ಹಂತದಲ್ಲಿ ರಾಜ್ಯಾದ್ಯಂತ 18 ಪ್ರಥಮ ದರ್ಜೆ ನಗರಗಳಲ್ಲಿನ 265 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯದ ಉನ್ನತೀಕರಣ ಮತ್ತು ಅಭಿವೃದ್ಧಿ ಪಡಿಸುವ ಕಾಮಗಾರಿಗಳನ್ನು ರೂ. 70.91 ಕೋಟಿಗಳ ಅಂದಾಜು ವೆಚ್ಚದಲ್ಲಿ ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರನ್ನು ನೇಮಕ ಮಾಡಿ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ನಿರ್ಮಲ್ ಜ್ಯೋತಿ 2ನೇ ಹಂತದ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಅವಶ್ಯವಿರುವ ರೂ. 58.58 ಕೋಟಿ ಹಣವನ್ನು ಪೂರಕ ಆಯವ್ಯಯದಲ್ಲಿ ಒದಗಿಸಲು ಅಥವಾ ಹುಡ್ಕೋನಿಂದ ಸರ್ಕಾರದ ಖಾತರಿ ಮೇಲೆ ಕರ್ನಾಟಕ ನಿರ್ಮೂಲನ ಮಂಡಳಿಯು ಸಾಲ ಪಡೆದು ಕೈಗೊಳ್ಳಲು ಆರ್ಥಿಕ ಇಲಾಖೆಯನ್ನು ಕೋರಲು ಉಲ್ಲೇಖ (1)ರ ಸಭೆಯಲ್ಲಿ ನಿರ್ಣಯಿಸಿದಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಆರ್ಥಿಕ ಇಲಾಖೆ ಮೇಲೆ ಉಲ್ಲೇಖ (3)ರಲ್ಲಿನಂತೆ ಹಿಂಬರಹ ನೀಡಿ ನಿರ್ಮಲ್ ಜ್ಯೋತಿ ಯೋಜನೆಯ 2ನೇ ಹಂತವನ್ನು ರೂ. 40 ಕೋಟಿಗೆ ಸೀಮಿತಗೊಳಿಸಿ ಪೂರ್ಣಗೊಳಿಸಲು ಮತ್ತು ಯೋಜನೆಯನ್ನು ಸ್ಥಗಿತಗೊಳಿಸಲು ಹಾಗೂ ಮತ್ತೆ ವಿಸ್ತರಣೆಗಾಗಿ ಕೋರಿಕೆ ಸಲ್ಲಿಸದಿರಲು ಆಡಳಿತ ಇಲಾಖೆಗೆ ಸೂಚಿಸಿರುತ್ತದೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಇ 26 ಕೊಮಂಲೆ 2007, ಬೆಂಗಳೂರು, ದಿನಾಂಕ: 7ನೇ ಜನವರಿ 2008.

ನಿರ್ಮಲ್ ಜ್ಯೋತಿ 2ನೇ ಹಂತದ ಕಾರ್ಯಕ್ರಮಗಳನ್ನು ಅಂದಾಜು ಮೊತ್ತವಾದ ರೂ. 70 ಕೋಟಿಗಳಿಂದ ರೂ. 40 ಕೋಟಿಗೆ ಸೀಮಿತಗೊಳಿಸತಕ್ಕದ್ದು. ಅಲ್ಲದೇ ಈಗಾಗಲೇ ರೂ. 14.50 ಕೋಟಿ ನಿರ್ಮಲ್ ಜ್ಯೋತಿ ಯೋಜನೆಗೆ ಬಿಡುಗಡೆಗೊಳಿಸಲಾಗಿದ್ದು, ಐಹೆಚ್‌ಎಸ್‌ಡಿಪಿ ಯೋಜನೆಗಾಗಿ ಮುಂಗಡವಾಗಿ ರೂ. 10 ಕೋಟಿ ಹಣವನ್ನು ಬಿಡುಗಡೆ ಮಾಡಿರುವುದನ್ನು ನಿರ್ಮಲ್ ಜ್ಯೋತಿ ಯೋಜನೆಗೆ ಬಳಸಿಕೊಳ್ಳುವುದು. ಇದಲ್ಲದೆ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ವಾಂಬೆ ಯೋಜನೆಯಡಿ ಫಲಾನುಭವಿಗಳಿಂದ ವಸೂಲು ಮಾಡಿ ಸರ್ಕಾರಕ್ಕೆ ಸಂದಾಯ ಮಾಡಬೇಕಾಗಿರುವ ರೂ. 10 ಕೋಟಿ (ರೂ. 6.72 ಕೋಟಿ ಆರಂಭಿಕ ಮೊತ್ತ + ಬಡ್ಡಿ) ಮತ್ತು ಫಲಾನುಭವಿಗಳಿಂದ ಇನ್ನು ವಸೂಲು ಮಾಡಬೇಕಾಗಿರುವ ರೂ. 1.89 ಕೋಟಿ ಒಟ್ಟಾರೆ ರೂ. 11.89 ಕೋಟಿ ಹಣವನ್ನು ನಿರ್ಮಲ್ ಜ್ಯೋತಿ 2ನೇ ಹಂತದ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಬಳಸತಕ್ಕದ್ದು. ಇದರಿಂದಾಗಿ ಒಟ್ಟಾರೆ ನಿರ್ಮಲ್ ಜ್ಯೋತಿ 2ನೇ ಹಂತದ ಕಾರ್ಯಕ್ರಮಕ್ಕೆ ರೂ. 36.39 ಕೋಟಿ (ರೂ. 11.89 + ರೂ. 24.50= ರೂ. 36.39) ಬಿಡುಗಡೆಯಾದಂತೆ ಆಗುತ್ತದೆ. ಆರ್ಥಿಕ ಇಲಾಖೆಯು ಈ ಯೋಜನೆಗೆ ಬೇಕಾಗಿರುವ ಹೆಚ್ಚುವರಿ ಮೊತ್ತ ರೂ. 3.61 ಕೋಟಿಯನ್ನು ಈಗಾಗಲೇ ಮಂಡಳಿಯಲ್ಲಿ ಲಭ್ಯವಿರುವ 36.39 ಕೋಟಿ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುವುದು.

ಇದಲ್ಲದೆ ನಿರ್ಮಲ್ ಜ್ಯೋತಿ ಯೋಜನೆಯನ್ನು ಮೇಲೆ ಸೂಚಿಸಿದಂತೆ ರೂ. 40 ಕೋಟಿಗೆ ಸೀಮಿತಗೊಳಿಸಿ ಸ್ಥಗಿತಗೊಳಿಸುವುದು ಮತ್ತು ವಿಸ್ತರಣೆಗಾಗಿ ಮತ್ತೆ ಕೋರಿಕೆ ಸಲ್ಲಿಸಬಾರದೆಂಬ ಷರತ್ತಿಗೆ ಒಳಪಟ್ಟಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಎಫ್‌ಡಿ 554 ವೆಚ್ಚ–9/2007, ದಿನಾಂಕ 14–12–2007ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಭಾರತ ಸರ್ಕಾರದ ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 103

ಜಿ.ಆರ್. ನಾಗರಾಜ

ಪೀಠಾಧಿಕಾರಿ–4,

ವಸತಿ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಕೋಲಾರ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ತೆರೆಯಲು ದಿವ್ಯ ಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಕೋಲಾರ ಈ ಸಂಸ್ಥೆಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಮಮಇ: 265: ಎಸ್‌ಜೆಡಿ 2004: ದಿನಾಂಕ 27–11–2004.
2. ಸರ್ಕಾರಿ ಆದೇಶ ಸಂಖ್ಯೆ: ಮಮಇ: 156: ಪಿಹೆಚ್‌ಪಿ: 2006(3), ದಿನಾಂಕ 28–8–2006.
3. ಸರ್ಕಾರಿ ಆದೇಶ ಸಂಖ್ಯೆ: ಮಮಇ: 244: ಪಿಹೆಚ್‌ಪಿ: 2007(5), ದಿನಾಂಕ 21–8–2007.
4. ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಇವರ ಕಡತ ಸಂಖ್ಯೆ: ನಿಅಕಇ:8:ಹಿ.ನಾ.:ಸ ವಾಣಿ: ಕೇಂದ್ರ: ಕೋಲಾರ: 2007–08: 12969, ದಿನಾಂಕ 19–12–2007.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1) ರಿಂದ (3)ರಲ್ಲಿ ಓದಲಾದ ಆದೇಶದಲ್ಲಿ ಬೆಂಗಳೂರು, ಬೆಳಗಾಂ, ಮೈಸೂರು, ಹುಬ್ಬಳ್ಳಿ, ಬಳ್ಳಾರಿ, ಶಿವಮೊಗ್ಗ, ದಾವಣಗೆರೆ, ರಾಯಚೂರು, ಬಾಗಲಕೋಟೆ, ಬೀದರ್, ಧಾರವಾಡ, ಗುಲ್ಬರ್ಗಾ, ಕೋಲಾರ ಮತ್ತು ತುಮಕೂರು ಸ್ಥಾನಗಳಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ಹಿರಿಯ ನಾಗರಿಕರಿಗಾಗಿ ಸಹಾಯವಾಣಿಗಳನ್ನು ಆರಕ್ಷಕ ಸಹಯೋಗದೊಂದಿಗೆ ಪ್ರತಿ ಕೇಂದ್ರಕ್ಕೆ ವಾರ್ಷಿಕ ರೂ. 3,95,000/– ಮೊತ್ತದಲ್ಲಿ ಸಹಾಯವಾಣಿ ಕೇಂದ್ರವನ್ನು ನಿರ್ವಹಿಸಲು ಅನುಮೋದನೆ ನೀಡಲಾಗಿದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ, ಇವರು ಮೇಲೆ ಕ್ರಮ ಸಂಖ್ಯೆ (4)ರ ಪ್ರಸ್ಥಾವನೆಯಲ್ಲಿ ಕೋಲಾರ ಜಿಲ್ಲೆಯಲ್ಲಿ ಸಹಾಯವಾಣಿ ಕೇಂದ್ರವನ್ನು ತೆರೆಯಲು 09 ಸಂಸ್ಥೆಗಳು ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಇವುಗಳಲ್ಲಿ ದಿವ್ಯ ಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಶ್ರೀನಿವಾಸಪುರ, ಕೋಲಾರ ಸಂಸ್ಥೆಗೆ ಅನುಮತಿ ನೀಡಬೇಕೆಂದು ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 494 ಪಿಹೆಚ್‌ಪಿ 2007, ಬೆಂಗಳೂರು, ದಿನಾಂಕ: 7ನೇ ಜನವರಿ 2008.

ಕೋಲಾರ ಜಿಲ್ಲೆಯಲ್ಲಿ ಪೊಲೀಸ್ ಅಧೀಕ್ಷಕರ ಕಛೇರಿಯ ಆವರಣದಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರ ತೆರೆಯಲು ದಿವ್ಯ ಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಅರಿಕುಂಟೆ ಗ್ರಾಮ, ಮಣಿಗನಹಳ್ಳಿ ಅಂಚೆ, ಶ್ರೀನಿವಾಸಪುರ ತಾಲ್ಲೂಕ್, ಕೋಲಾರ ಜಿಲ್ಲೆ ಇವರಿಗೆ ಮಂಜೂರಾತಿ ನೀಡಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ: 265: ಎಸ್‌ಜೆಡಿ: 2004, ದಿನಾಂಕ 27–11–2004ರಲ್ಲಿರುವ ಷರತ್ತುಗಳನ್ನು ಸದರಿ ಸಂಸ್ಥೆಯು ಪಾಲಿಸತಕ್ಕದ್ದು.

ಹಿರಿಯ ನಾಗರಿಕರ ಸಹಾಯವಾಣಿಯನ್ನು ಪ್ರಾರಂಭಿಸಿದ ನಂತರ ತನಿಖಾ ವರದಿಯೊಂದಿಗೆ ಅನುದಾನ ಬಿಡುಗಡೆಗೆ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು, ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಹಿರಿಯ ನಾಗರೀಕರ ನೀತಿ ಲೆಕ್ಕಶೀರ್ಷಿಕೆ 2235–02–104–2–04 (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆದೇಶ ಸಂಖ್ಯೆ: ಎಫ್‌ಡಿ:1:ಟಿಎಫ್‌ಪಿ: 2006: ದಿನಾಂಕ 10–7–1996ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದಡಿಯಲ್ಲಿ ಹೊರಡಿಸಲಾಗಿದೆ.

ಭಾರತದ ರಾಷ್ಟ್ರಾಧ್ಯಕ್ಷರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 104

ವಿ. ಶಿವಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ಸಂಖ್ಯೆ: ಸಕಇ 97 ಬಿಸಿಎ 2007, ಬೆಂಗಳೂರು, ದಿನಾಂಕ 3ನೇ ಜನವರಿ 2008

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಸಕಇ 97 ಬಿಸಿಎ 2007, ದಿನಾಂಕ 1–6–2007ರ ಆದೇಶ ಭಾಗದ ಮೊದಲನೆ ಕಂಡಿಕೆಯ ಕೆಳಗೆ ಬರುವ ಹುದ್ದೆಗಳು ಮತ್ತು ಮಂಜೂರಾತಿ ಸಂಖ್ಯೆಗಳಿಗೆದುರಾಗಿ ಆಯಾ ಹುದ್ದೆಗಳ ವೇತನ ಶ್ರೇಣಿಗಳನ್ನು ನಮೂದಿಸಿ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಹುದ್ದೆಗಳು	ಮಂಜೂರಾತಿ ಸಂಖ್ಯೆ	ವೇತನ ಶ್ರೇಣಿ
1	ಜಂಟಿ ನಿರ್ದೇಶಕರು	01	ರೂ. 20025–28250
2	ಉಪ ನಿರ್ದೇಶಕರು	01	ರೂ. 18150–26925
3	ಸಹಾಯಕ ನಿರ್ದೇಶಕರು	01	ರೂ. 14050–25050

4	ಕಛೇರಿ ಅಧೀಕ್ಷಕರು	01	ರೂ. 10000–18150
5	ಪ್ರಥಮ ದರ್ಜೆ ಸಹಾಯಕರು	02	ರೂ. 7275–13350
6	ದ್ವಿತೀಯ ದರ್ಜೆ ಸಹಾಯಕರು	02	ರೂ. 5800–10000
7	ಶೀಘ್ರಲಿಪಿಗಾರರು	01	ರೂ. 7275–13350
8	ಬೆರಳಚ್ಚುಗಾರರು	01	ರೂ. 5800–10000
9	ವಾಹನ ಚಾಲಕರು	02	ರೂ. 5800–10000
10	ಗ್ರೂಪ್ ಡಿ ನೌಕರರು (ಜವಾನ)	02	ರೂ. 4800–7275
	ಒಟ್ಟು	**14**	

ಅದೇ ಆದೇಶದ ಎರಡನೆ ಕಂಡಿಕೆಯ ಕೆಳಗೆ ಬರುವ ಷರತ್ತುಗಳಲ್ಲಿ ಕ್ರಮ ಸಂಖ್ಯೆ 1ರ ಷರತ್ತಿನಲ್ಲಿ ನಮೂದಿಸಲಾದ "ಈ ವಿಶೇಷ ಕೋಶಕ್ಕೆ ಅಗತ್ಯವಿರುವ ಹುದ್ದೆಗಳು ತಾತ್ಕಾಲಿಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಿಬ್ಬಂದಿಯ ಮರು ಹೊಂದಾಣಿಕೆ/ನಿಯೋಜನೆ ಮೂಲಕ ತುಂಬತಕ್ಕದ್ದು" ಎಂಬುದರ ಬದಲಾಗಿ "ಈ ವಿಶೇಷ ಕೋಶಕ್ಕೆ ತಾತ್ಕಾಲಿಕವಾಗಿ ಸೃಜನೆಯಾಗಿರುವ ಹುದ್ದೆಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ಸಿಬ್ಬಂದಿಗಳ ಮರು ಹೊಂದಾಣಿಕೆ/ನಿಯೋಜನೆ ಮೂಲಕ ತುಂಬತಕ್ಕದ್ದು" ಎಂದು ತಿದ್ದುಪಡಿ ಮಾಡಲಾಗಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

ಭಾರತದ ರಾಷ್ಟ್ರಪತಿಗಳ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 110

ಕೆ. ಸುಬ್ಬಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–II,
ಸಮಾಜ ಕಲ್ಯಾಣ ಇಲಾಖೆ

ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ಕೋಲಾರ ಜಿಲ್ಲೆಯ ಮಾಲೂರು ಪಶು ಆಸ್ಪತ್ರೆಯಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು ಮಾಲೂರು ತಾಲ್ಲೂಕು ಚಿಕ್ಕಕುಂತೂರು ಗ್ರಾಮಕ್ಕೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ:
1. ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಕೋಲಾರ, ಇವರ ಪತ್ರ ಸಂಖ್ಯೆ: ಉನಿಕೋ/ಹೊಪ.ಸಂಸ್ಥೆ/ಚಿಕ್ಕಕುಂತೂರು/04–05, ದಿನಾಂಕ 18–8–2007.
2. ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ: ಆಪಸಂ/ಡಿವಿಡಿ–3/ವಿವ–28/06–07, ದಿನಾಂಕ 5–10–2007.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಕೋಲಾರ, ಇವರು ಚಿಕ್ಕಕುಂತೂರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವನ್ನು ಜಿಲ್ಲಾ ಪಂಚಾಯತ್‌ಯಿಂದ ಪ್ರಾರಂಭಿಸಿರುವ ಸಂಸ್ಥೆಯನ್ನು ಸಕ್ರಮಗೊಳಿಸಲು ಪಶು ಆಸ್ಪತ್ರೆ, ಮಾಲೂರು, ಇಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು ಸ್ಥಳಾಂತರಿಸುವಂತೆ ಕೋರಿ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು, ಇವರು ಪಶು ಆಸ್ಪತ್ರೆ, ಮಾಲೂರು, ಇಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರಕ್ಕೆ ಒಂದು ಡಿ–ದರ್ಜೆಯ ಹುದ್ದೆ ಮಾತ್ರ ಮಂಜೂರಾಗಿದ್ದು, ಪಶುವೈದ್ಯಕೀಯ ಪರೀಕ್ಷಕರು (ಗ್ರೇಡ್–2) ಹುದ್ದೆಯನ್ನು ಕೋಲಾರ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯಿಂದ ಚಿಕ್ಕಕುಂತೂರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಕ್ಕೆ ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಕೋಲಾರ ಇವರು ಸೂಚಿಸಿರುವಂತೆ ಸ್ಥಳಾಂತರ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ. ಕೋಲಾರ ಜಿಲ್ಲಾ ಕುರಿ ಪೋಷಕರ ಸಂಘದಲ್ಲಿರುವ ಡಿ–ದರ್ಜೆಯ ಹುದ್ದೆಯನ್ನು ಸ್ಥಳಾಂತರಿಸುವ ಮೂಲಕ ಮಾಲೂರು ಪಶು ಆಸ್ಪತ್ರೆಯಲ್ಲಿ ಕೊರತೆಯಾಗುವ ಡಿ–ದರ್ಜೆಯ ಹುದ್ದೆಯನ್ನು ತುಂಬಬಹುದಾಗಿದೆ. ಇದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ವೆಚ್ಚವಾಗುವುದಿಲ್ಲ ಎಂದೂ ಸಹ ತಿಳಿಸಿದ್ದಾರೆ. ಹೀಗಾಗಿ ಚಿಕ್ಕಕುಂತೂರಿನ ಪಶು ವೈದ್ಯಕೀಯ ಸಂಸ್ಥೆಯನ್ನು ಸಕ್ರಮಗೊಳಿಸುವಂತೆಯೂ ಹಾಗೂ ಕುರಿ ಪೋಷಕರ ಸಂಘ, ಕೋಲಾರದಲ್ಲಿ ಒಟ್ಟು 12 ಡಿ–ದರ್ಜೆಯ ಹುದ್ದೆಗಳಿದ್ದು, ಇವು ಸರ್ಕಾರದಿಂದ ಮಂಜೂರಾಗಿರುವ ಹುದ್ದೆಗಳಾಗಿರುತ್ತದೆಂದೂ ತಿಳಿಸಿದ್ದಾರೆ. ಅಲ್ಲದೇ ಸದರಿ ಹುದ್ದೆಗಳಿಗೆ ಸರ್ಕಾರದಿಂದ ಲೆಕ್ಕಶೀರ್ಷಿಕೆ 2403–00–001–0–52 ಜಿಲ್ಲಾ ಪಂಚಾಯತ್ ಯೋಜನೇತರ ಅಡಿಯಲ್ಲಿ ವೇತನ ಭತ್ಯೆಗಳನ್ನು ನೀಡಲಾಗುತ್ತಿದ್ದು, ಇದರಿಂದ ಕುರಿ ಪೋಷಕ ಸಂಘದವರಿಂದ ಡಿ–ದರ್ಜೆ ಹುದ್ದೆಯನ್ನು ಮಾಲೂರು ಪಶು ಆಸ್ಪತ್ರೆಗೆ ವರ್ಗಾಯಿಸುವ ಬಗ್ಗೆ ಯಾವುದೇ ಅಡ್ಡಿ ಇರುವುದಿಲ್ಲವೆಂದು ತಿಳಿಸಿ, ಕೋಲಾರ ಜಿಲ್ಲೆಯ ಮಾಲೂರು ಪಶು ಆಸ್ಪತ್ರೆಯಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು

ಮಾಲೂರು ತಾಲ್ಲೂಕು, ಚಿಕ್ಕಕುಂತೂರು ಗ್ರಾಮಕ್ಕೆ ಸ್ಥಳಾಂತರ ಮಾಡಿ ಮಂಜೂರಾತಿ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಪಸಂಮೀ 163 ಪಸಸೇ 2007, ಬೆಂಗಳೂರು, ದಿನಾಂಕ: 11ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರಕ್ಕೆ ಆರ್ಥಿಕ ಹೊರೆಯಾಗದಿರುವ ಅಂಶವನ್ನು ಪರಿಗಣಿಸಿ, ಕೋಲಾರ ಜಿಲ್ಲೆಯ ಮಾಲೂರು ಪಶು ಆಸ್ಪತ್ರೆಯಲ್ಲಿರುವ ಕೃತಕ ಗರ್ಭಧಾರಣಾ ಕೇಂದ್ರವನ್ನು, ಮಂಜೂರಾದ ಡಿ–ದರ್ಜೆ ಹುದ್ದೆ ಹಾಗೂ ಕೋಲಾರ ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆಯ ಪಶುವೈದ್ಯಕೀಯ ಪರೀಕ್ಷಕರು (ಗ್ರೇಡ್–2) ಹುದ್ದೆಯೊಂದಿಗೆ ಮಾಲೂರು ತಾಲ್ಲೂಕು, ಚಿಕ್ಕಕುಂತೂರು ಗ್ರಾಮಕ್ಕೆ ಸ್ಥಳಾಂತರಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 114

ಎಂ.ಪಿ. ನಾಗರಾಜ
ಪೀಠಾಧಿಕಾರಿ–2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ–ಎ)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಇವರ ನಿವೃತ್ತಿ ಉಪದಾನದ ಮೇಲೆ ಬಡ್ಡಿಯನ್ನು ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 18 ಎಸ್‌ಇಎನ್ 06 ದಿನಾಂಕ 28–7–2007.

2. ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಇವರು ದಿನಾಂಕ 17–8–2007ರಂದು ಸರ್ಕಾರಕ್ಕೆ ಸಲ್ಲಿಸಿರುವ ಮನವಿ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀಮತಿ ಪಿ. ಪುಷ್ಪರಾಣಿ, ನಿವೃತ್ತ ಉಪ ಕಾರ್ಯದರ್ಶಿ ಮತ್ತು ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಇವರುಗಳು ಕರ್ನಾಟಕ ಸರ್ಕಾರ ಸಚಿವಾಲಯದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಶ್ರೀ ಹೆಚ್.ಎಸ್. ಶ್ರೀಧರಮೂರ್ತಿ, ಹಿಂದಿನ ಉಪ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರಿಂದ ದೋಷಾರೋಪಣೆ ಪಟ್ಟಿ ಹೊರಡಿಸಲು ಅನುಮೋದನೆ ನೀಡಿದ್ದ ಕಡತದ ಸಂಖ್ಯೆ: ಪಿಎಫ್‌ಎಸ್ 201 ಡಿಎಸ್‌ಇ 92ರಲ್ಲಿ ಪ್ರಕರಣದಲ್ಲಿ ಯಾವುದೇ ಕ್ರಮ ಜರುಗಿಸದೇ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿದ್ದಾರೆಂದು ಇವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ದಿನಾಂಕ 29–5–2006ರ ಜ್ಞಾಪನಾ ಪತ್ರ ಮತ್ತು ನೋಟೀಸ್ ಜಾರಿಗೊಳಿಸಲಾಗಿತ್ತು. ಸದರಿ ನೋಟೀಸಿಗೆ ಇಬ್ಬರೂ ಆಪಾದಿತರು ಸಲ್ಲಿಸಿದ್ದ ಪ್ರತಿರಕ್ಷಣಾ ಹೇಳಿಕೆಯಲ್ಲಿನ ಅಂಶ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಯಾವುದೇ ಕರ್ತವ್ಯಲೋಪ ಹಾಗೂ ದುರ್ನಡತೆ ಎಸಗಿಲ್ಲವೆಂದು ಶ್ರೀಮತಿ ಪಿ. ಪುಷ್ಪರಾಣಿ, ನಿವೃತ್ತ ಉಪ ಕಾರ್ಯದರ್ಶಿ ಮತ್ತು ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಅವರುಗಳನ್ನು ದಿನಾಂಕ 29–5–2006ರ ನೋಟೀಸಿನಲ್ಲಿ ಮಾಡಲಾದ ದೋಷಾರೋಪಣೆಯಿಂದ ಮುಕ್ತರನ್ನಾಗಿಸಿದೆ. ಹಾಗೂ ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಅವರುಗಳು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ, ಅವುಗಳನ್ನು ಪಡೆಯಲು ಅರ್ಹರಿರುತ್ತಾರೆಂದು ಆದೇಶಿಸಿದೆ.

ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಇವರ ಮೇಲೆ (2)ರಲ್ಲಿ ಓದಲಾದ ಮನವಿಯಲ್ಲಿ ತಮ್ಮ ಮೇಲೆ ಮಾಡಲಾದ ದೋಷಾರೋಪಣೆಯಿಂದ ಮುಕ್ತಗೊಳಿಸಿರುವುದರಿಂದ, ತಮಗೆ ತಡೆಹಿಡಿಯಲಾದ ನಿವೃತ್ತಿ ಸೌಲಭ್ಯಗಳಿಗೆ ನಿಯಮಾನುಸಾರ ಬಡ್ಡಿ ನೀಡಬೇಕೆಂದು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 57 ಸೇಇನಿ 2005, ಬೆಂಗಳೂರು, ದಿನಾಂಕ: 18ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ದಿನಾಂಕ 31–8–2006ರಂದು ವಯೋನಿವೃತ್ತಿ ಹೊಂದಿರುವ ಶ್ರೀ ಎಂ.ಸಿ. ಪೂಣಚ್ಚ, ನಿವೃತ್ತ ಅಧೀನ ಕಾರ್ಯದರ್ಶಿ ಇವರಿಗೆ ವಿಳಂಬವಾಗಿ ಪಾವತಿಸಲಾದ ನಿವೃತ್ತಿ ಉಪದಾನ ಮೊತ್ತ ರೂ. 1,39,479/–ರ ಮೇಲೆ ಶೇಕಡ 8ರಂತೆ ಬಡ್ಡಿಯನ್ನು ದಿನಾಂಕ 1–12–2006ರಿಂದ 30–9–2007ರವರೆಗಿನ ಅವಧಿಗೆ ಮಂಜೂರು ಮಾಡಲಾಗಿದೆ.

ನಿವೃತ್ತಿ ಉಪದಾನದ ಮೊತ್ತ	ಬಡ್ಡಿ ಲಭ್ಯವಾಗುವ ಅವಧಿ ದಿನಾಂಕ
ರೂ. 1,39,479ರ ಮೇಲೆ	1–12–2006 ರಿಂದ 30–9–2007ರವರೆಗೆ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 2465 ವೆಚ್ಚ–5: 2007, ದಿನಾಂಕ 1–1–2008ರಲ್ಲಿನ ಸಹಮತಿಯನ್ವಯ ಹೊರಡಿಸಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 115

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–3)

ಶಿಕ್ಷಣ ಸಚಿವಾಲಯ

ವಿಷಯ : ಸಾರ್ವಜನಿಕ ಶಿಕ್ಷಣ ಇಲಾಖೆಯ, ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡ, ಇವರ ಬಡ್ತಿಯನ್ನು ಹಿಂದಕ್ಕೆ ಪಡೆಯುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 23 ಡಿಪಿಐ 2007, ದಿನಾಂಕ 4–7–2007.
2. ನೋಟೀಸು ದಿನಾಂಕ 25–10–2007 ಮತ್ತು 22–11–2007.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 62 ಡಿಜಿಡಿ 2002, ದಿನಾಂಕ 22–10–2007.
4. ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ರಾಮನಗರ, ಇವರ ಹೇಳಿಕೆ ದಿನಾಂಕ 24–11–2007.

ಪ್ರಸ್ತಾವನೆ :

ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡರವರು ಹಿಂದೆ ಬಾಲ್ಕಿ ತಾಲ್ಲೂಕು, ಸಹಾಯಕ ಶಿಕ್ಷಣಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಬೀದರ್ ಜಿಲ್ಲೆಯಲ್ಲಿ ಕೇಂದ್ರ ಪ್ರಾಯೋಜಿತ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಕಳಪೆ ಸಾಮಗ್ರಿಗಳನ್ನು ಹೆಚ್ಚಾಗಿ ಖರೀದಿಸಿ ಅವ್ಯವಹಾರವಾಗಿದೆ ಎಂಬ ಆರೋಪಣೆಯ ಮೇಲೆ ಅವರನ್ನೂ ಒಳಗೊಂಡಂತೆ ಇತರೆ ಕೆಲವು ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ವಹಿಸಲಾಗಿತ್ತು. ಈ ಸಂಬಂಧ ಇಲಾಖಾ ವಿಚಾರಣೆ ಬಾಕಿ ಇದ್ದು, ದಿನಾಂಕ 9–5–2007ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪ ನಿರ್ದೇಶಕರು ಹಾಗೂ ತತ್ಸಮಾನ ವೃಂದದ ಹುದ್ದೆಯ ಬಡ್ತಿ ನೀಡುವ ಸಂಬಂಧ ಇಲಾಖಾ ಬಡ್ತಿ ಸಮಿತಿ ಸಭೆಯಲ್ಲಿ ಜೇಷ್ಠತೆ ಅನುಸಾರ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಬಡ್ತಿಗೆ ಪರಿಗಣಿಸುವಾಗ ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡರವರ ಹೆಸರನ್ನು ಸಹ ಪರಿಗಣಿಸಲಾಯಿತು. ಹಾಗೆ ಪರಿಗಣಿಸುವಾಗ ಅವರ ವಿರುದ್ಧ ಇಲಾಖಾ ವಿಚಾರಣೆ ಇರುವುದನ್ನು ಸಮಿತಿಯ ಗಮನಕ್ಕೆ ತರದೆ ಕಣ್ತಪಿನಿಂದ ಬಿಟ್ಟುಹೋಗಿದೆ. ಹಾಗಾಗಿ, ಇಲಾಖಾ ಬಡ್ತಿ ಸಮಿತಿಯು ಶಿಫಾರಸ್ಸು ಮಾಡಿದ ಹಿನ್ನಲೆಯಲ್ಲಿ ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡರವರಿಗೆ ದಿನಾಂಕ 4–7–2007ರ ಆದೇಶದಲ್ಲಿ ಉಪ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಲಾಗಿದೆ. ತದನಂತರ ಅವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರುವುದನ್ನು ಗಮನಿಸಿ ಮುಂಬಡ್ತಿಯನ್ನು ಏಕೆ ಹಿಂದಕ್ಕೆ ಪಡೆಯಬಾರದೆಂಬ ಬಗ್ಗೆ ನೋಟೀಸ್ ನೀಡಲಾಯಿತು. ತದನಂತರ ಇಲಾಖಾ ವಿಚಾರಣೆ ಅಂತಿಮವಾಗಿ ಇತ್ಯರ್ಥವಾಗಿದ್ದು, ದಿನಾಂಕ 22–10–2007ರ ಆದೇಶದಲ್ಲಿ ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡರವರ ವಿರುದ್ಧ ಇದ್ದ ಆಪಾದನೆಗಳು ಸಾಬೀತಾದ ಕಾರಣ ಅವರ ಎರಡು ವರ್ಷಗಳ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮಗಳೊಂದಿಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಲಾಗಿದೆ.

ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡರವರು ದಿನಾಂಕ 24–11–2007ರ ತಮ್ಮ ಮನವಿಯಲ್ಲಿ ವಿವರಣೆ ನೀಡಿ, ತಮ್ಮ ವಿರುದ್ಧ ಇಲಾಖಾ ವಿಚಾರಣೆ ಇದ್ದುದನ್ನು ಒಪ್ಪಿಕೊಂಡಿರುತ್ತಾರೆ. ಹಾಗಾಗಿ, ಅವರು ಬಡ್ತಿಗೆ ಅರ್ಹರಾಗುವುದಿಲ್ಲವೆಂದು ಸರ್ಕಾರವು ಮನಗಂಡಿದೆ. ಆದ್ದರಿಂದ ಕಣ್ತಪ್ಪಿನಿಂದ ಬಡ್ತಿ ನೀಡಿರುವ ಆದೇಶವನ್ನು ವಾಪಸ್ಸು ಪಡೆಯಲು ನಿರ್ಧಾರವಾಗಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿತು. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಡಿಪಿಐ 2007 ಬೆಂಗಳೂರು, ದಿನಾಂಕ: 2ನೇ ಜನವರಿ 2008.

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ವೃಂದದ ಶ್ರೀ ಸಿ.ಎಂ. ಪುಟ್ಟಸ್ವಾಮಿಗೌಡ, ಇವರಿಗೆ ಅಧಿಸೂಚನೆ ಸಂಖ್ಯೆ: ಇಡಿ 23 ಡಿಪಿಐ 2007, ದಿನಾಂಕ 4–7–2007ರಲ್ಲಿ ಉಪ ನಿರ್ದೇಶಕರು (ಆಡಳಿತ) ಹುದ್ದೆಗೆ ಬಡ್ತಿ ನೀಡಿ, ರಾಮನಗರ ಇಲ್ಲಿ ನೇಮಕ ಮಾಡಿದ್ದ ಆದೇಶವನ್ನು ರದ್ದುಪಡಿಸಿ, ಅವರಿಗೆ ನೀಡಿದ್ದ ಬಡ್ತಿ ಆದೇಶವನ್ನು ವಾಪಸ್ಸು ಪಡೆಯಲಾಗಿದೆ. ತತ್ಪರಿಣಾಮವಾಗಿ ಇವರನ್ನು ಹಿರಿಯ ಉಪನ್ಯಾಸಕರು, ಡಯಟ್, ಚಿಕ್ಕಮಗಳೂರು, ಇಲ್ಲಿ ಖಾಲಿ ಇರುವ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಸದರಿಯವರು ಈ ಕೂಡಲೇ ಈ ಹುದ್ದೆಗೆ ವರದಿ ಮಾಡಿಕೊಳ್ಳುವಂತೆ ಸೂಚಿಸಿದೆ.

ಭಾರತ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 122

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ಸೇವೆಗಳು–1,2)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ: 2006-2007ನೇ ಸಾಲಿಗೆ ಡಿಆರ್‌ಡಿಎ ಆಡಳಿತ ಯೋಜನೆಯಡಿ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನ 4 ಜಿಲ್ಲಾ ಪಂಚಾಯತಿಗಳಿಗೆ ಮತ್ತು ರಾಯಚೂರು ಜಿಲ್ಲಾ ಪಂಚಾಯಿತಿಗೆ ಕಡಿತಗೊಳಿಸಿದ ಅನುದಾನವನ್ನು ಪೂರ್ವ ಸ್ಥಿತಿಗೆ ತಂದು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಕೇಂದ್ರ ಸರ್ಕಾರದ ಪತ್ರದ ಸಂಖ್ಯೆ: ಆರ್ 17014:10:2006 ಡಿಆರ್‌ಡಿಎ (ಎಸ್‌ಆರ್ ನಂ. 10) ದಿನಾಂಕ: 02-05-2006, (ಎಸ್ ನಂ. 50) ದಿನಾಂಕ: 10-11-2006. (ಎಸ್ ನಂ. 62) ದಿನಾಂಕ 14-12-2006, (ಎಸ್ ನಂ. 95) ದಿನಾಂಕ: 17-01-2007 (ಎಸ್ ನಂ. 127) ದಿನಾಂಕ: 05-02-2007 ಮತ್ತು (ಎಸ್ ನಂ. 133) ದಿನಾಂಕ: 06-02-2007.
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 07 ಜಿಪಿಎ 2003 ದಿನಾಂಕ: 14-07-05.
3. ಸಮ ಸಂಖ್ಯೆಯ ಸರ್ಕಾರಿ ಆದೇಶಗಳ ದಿನಾಂಕ 19-05-2006, 19-12-2006, ತಿದ್ದುಪಡಿ ಆದೇಶ ದಿನಾಂಕ: 22-12-2006, 03-02-2007, 09-03-2007 ಮತ್ತು 29-03-2007.
4. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಆರ್-17014/10/2006 ಡಿಆರ್‌ಡಿಎ (ಎಸ್ ನಂ. 199) ದಿನಾಂಕ 29.03.2007.
5. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಆರ್-17014/10/2006 ಡಿಆರ್‌ಡಿಎ (ಎಸ್ ನಂ. 207) ದಿನಾಂಕ 30.03.2007.

ಪ್ರಸ್ತಾವನೆ:

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೇಲೆ ಓದಲಾದ (1) ಮತ್ತು (3)ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಡಿಆರ್‌ಡಿಎ ಆಡಳಿತ ಯೋಜನೆಯಡಿ ಒಂದನೇ ಕಂತಿನ ಹಣ ರೂ. 4,77,47,000 ಮತ್ತು ರೂ. 1,59,20,000 ಕ್ರಮವಾಗಿ ಬಿಡುಗಡೆ ಮಾಡಿವೆ. ಕೇಂದ್ರ ಸರ್ಕಾರ ರಾಜ್ಯದ 23 ಜಿಲ್ಲಾ ಪಂಚಾಯತಿಗಳಿಗೆ ರೂ. 4,71,39,000 ಮತ್ತು ರೂ. 1,57,13,000 ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರವು ಓದಲಾಗಿದೆ (4)ರಲ್ಲಿ 4 ಜಿಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 26,38,00,000 ಗಳನ್ನು ಬಿಡುಗಡೆ ಮಾಡಿದೆ. ಈ ಅನುದಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ರೂ. 8,79,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಓದಲಾಗಿದೆ (5)ರಲ್ಲಿ ಕೇಂದ್ರ ಸರ್ಕಾರ ರಾಯಚೂರು ಜಿಲ್ಲಾ ಪಂಚಾಯಿತಿಗೆ ಕಡಿತಗೊಳಿಸಿದ್ದ ಅನುದಾನವನ್ನು ಪೂರ್ವ ಸ್ಥಿತಿಗೆ (restoration of cut) ತಂದು ರೂ. 3,79,00,000 ಗಳನ್ನು ಬಿಡುಗಡೆ ಮಾಡಿದೆ. ಈ ಅನುದಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ರೂ. 1,26,000 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ, ಕೇಂದ್ರ ಸರ್ಕಾರ ಓದಲಾಗಿದೆ (4) ಮತ್ತು (5)ರ 2006-07ನೇ ಸಾಲಿನ ಅನುದಾನ ಬಿಡುಗಡೆ ಪತ್ರ ದಿನಾಂಕ 22.04.2007 ರಂದು ಸ್ವೀಕೃತವಾಗಿರುತ್ತದೆ. ಆದುದರಿಂದ 2007-08ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಿಂದ ನಾಲ್ಕು ಜಿಲ್ಲಾ ಪಂಚಾಯಿತಿಗೆ ಎರಡನೇ ಕಂತಿನ ಅನುದಾನ ಹಾಗೂ ರಾಯಚೂರು ಜಿಲ್ಲಾ ಪಂಚಾಯಿತಿಗೆ ಪೂರ್ವ ಸ್ಥಿತಿಗೆ ತಂದ ಅನುದಾನ ಸೇರಿ ರೂ. 10,05,000 ಗಳನ್ನು 5 ಜಿಲ್ಲಾ ಪಂಚಾಯತಿಗಳಿಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕಾಗಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಎಸ್‌ಜೆವೈ ಡಿಆರ್‌ಡಿಎ 2006, ಬೆಂಗಳೂರು, ದಿನಾಂಕ: 22ನೇ ಮೇ 2007

2006-07ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರ ರೂ. 10,05,000 (ರೂ. ಹತ್ತು ಲಕ್ಷದ ಐದು ಸಾವಿರ ಮಾತ್ರ)ಗಳನ್ನು ಈ ಕೆಳಕಂಡ 5 ಜಿಲ್ಲಾ ಪಂಚಾಯತ್‌ಗಳಿಗೆ ಡಿಆರ್‌ಡಿಎ ಆಡಳಿತ ಯೋಜನೆಯಡಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಜಿಲ್ಲಾ ಪಂಚಾಯತ್‌ಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ಯಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

ಅನುದಾನದ ಮಾದರಿಯು ಕೇಂದ್ರ ಮತ್ತು ರಾಜ್ಯಗಳ ನಡುವೆ 75:25ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ: "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ-ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ- (ಕೇಂದ್ರ ಪುರಸ್ಕೃತ ಯೋಜನೆ) 2007-2008 (2515-00-196-6-06)" ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜಡ್‌ಪಿಎ 2003 ದಿನಾಂಕ 08-09-2004 ಮತ್ತು 14-07-2005 ರನ್ವಯ ಜಿಲ್ಲಾ ಪಂಚಾಯತ್ ನಿಧಿಗೆ ಜಮೆ ಮಾಡಿಕೊಂಡು ಭರಿಸತಕ್ಕದ್ದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಾಡುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ.

2007-2008ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಉಪ ಕಾರ್ಯದರ್ಶಿ (ಆಡಳಿತ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಆಯಾ ಮಾಹೆಯ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 7ನೇ ತಾರೀಖಿನೊಳಗೆ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನ ವರದಿಗಳನ್ನು, ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ. ಗ್ರಾಅಪ 217 ಪಿಬಿಎಸ್ 07 ದಿನಾಂಕ: 15–05–2007ರಲ್ಲಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ರಶ್ಮಿ ಮಹೇಶ್,

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಎಸ್‌ಜಿವೈ ಡಿಆರ್‌ಡಿಎ 2006, ಬೆಂಗಳೂರು, ದಿನಾಂಕ: 22–05–2007

(ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರ ಸರ್ಕಾರ ಪೂರ್ವ ಸ್ಥಿತಿಗೆ ತಂದು ಬಿಡುಗಡೆ ಮಾಡಿರುವ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಅನುದಾನ
1.	ರಾಯಚೂರು	420	3600ZZ0001	3,79,000	1,26,000
			ಒಟ್ಟು (ಅ)	3,79,000	1,26,000

ಕ್ರ. ಸಂ.	ಜಿಲ್ಲಾ ಪಂಚಾಯತಿ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಎರಡನೇ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಅನುದಾನ
1	ಚಿಕ್ಕಮಗಳೂರು	408	1800ZZ0017	0	0
2	ಗದಗ್	462	2600ZZ0001	0	0
3	ಗುಲ್ಬರ್ಗಾ	417	3200ZZ0003	0	0
4	ತುಮಕೂರು	406	0800ZZ0001	26,38,000	8,79,000
ಒಟ್ಟು: (ಆ)				26,38,000	8,79,000
ಒಟ್ಟು: (ಅ+ಆ)				30,17,000	10,05,000

ಪಿ.ಆರ್. 1002

ವಿ. ರಶ್ಮಿ ಮಹೇಶ್,

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಿಷಯ: ಎಸ್‌ಜಿಎಸ್‌ವೈಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಎಸ್‌ಜಿಎಸ್‌ವೈ ಸಮಿತಿಗಳ ರಚನೆ ಬಗ್ಗೆ.

ಪ್ರಸ್ತಾವನೆ:

ಕೇಂದ್ರ ಸರ್ಕಾರವು ಬಡತನವನ್ನು ನಿವಾರಿಸುವ ಸಲುವಾಗಿ 1.4.99 ರಿಂದ ಸ್ವಯಂ ಉದ್ಯೋಗ ಕಾರ್ಯಕ್ರಮಗಳನ್ನು ಪುನರ್ ಸಂಘಟಿಸಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಎಂಬ ನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಈ ಕಾರ್ಯಕ್ರಮವು ಸ್ವಯಂ ಉದ್ಯೋಗದ ಎಲ್ಲಾ ರೂಪುರೇಷೆಗಳನ್ನು ಸೇರಿಸಿ ಸ್ವಯಂ ಸಹಾಯ ಗುಂಪುಗಳಾಗಿ ಸಂಘಟಿಸಿ ತರಬೇತಿ, ಸಾಲ, ಮೂಲ ಸೌಕರ್ಯ ಮತ್ತು ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದೆ. ಎಸ್‌ಜಿಎಸ್‌ವೈನ ಮೂಲ ಉದ್ದೇಶ ಗ್ರಾಮೀಣ ಬಡಜನತೆಯನ್ನು ಸ್ವಯಂ ಉದ್ಯೋಗಗಳ ಮೂಲಕ ಕಾಲಾನುಕ್ರಮೇಣ ಬಡತನ ರೇಖೆಯಿಂದ ಮೇಲೆತ್ತುವುದು. ಈ ಕಾರ್ಯಕ್ರಮವನ್ನು ಸ್ವಸಹಾಯ ಗುಂಪುಗಳ ನಿರ್ಮಾಣದಿಂದ ಸಾಮಾಜಿಕ ಚಟುವಟಿಕೆಗಳ

ಮೂಲಕ ಬ್ಯಾಂಕ್‌ನಿಂದ ಸಾಲ ಹಾಗೂ ಸರ್ಕಾರದಿಂದ ಸಹಾಯಧನ ನೀಡಿ, ಆಸ್ತಿ ನಿರ್ಮಾಣ ಹಾಗೂ ಆದಾಯ ತರುವಂತಹ ಆಯ್ಕೆ ಮಾಡಿದ ಚಟುವಟಿಕೆಗೆ ತರಬೇತಿ ನೀಡಿ ಅನುಷ್ಠಾನಗೊಳಿಸಬೇಕಾಗುವುದು. ಸ್ವರೋಜ್‌ಗಾರಿಗಳನ್ನು ಬಡ ವರ್ಗದಿಂದ ಆಯ್ದುಕೊಂಡು, ಗುಣಮಟ್ಟ ಕಾಪಾಡಿಕೊಂಡು ಈ ಸ್ವರ್ಣ ಜಯಂತಿ ರೋಜ್‌ಗಾರ್ ಯೋಜನೆಯಿಂದ ಬಡ ವರ್ಗದ ಜನರನ್ನು ಬಡತನದ ರೇಖೆಯಿಂದ ಮೇಲೆತ್ತಲು ಸಹಾಯ ಹಸ್ತ ನೀಡುವುದು ಅವಶ್ಯ. ಕೇಂದ್ರ ಸರ್ಕಾರದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ ಮಾರ್ಗಸೂಚಿಯನ್ವಯ ಎಸ್‌ಜಿಎಸ್‌ವೈಯನ್ನು ಜಂಟಿ ಕಾರ್ಯಕ್ರಮವೆಂದು ಪರಿಗಣಿಸಿರುವುದರಿಂದ ಪರಿಣಾಮಕಾರಿ ಅನುಷ್ಠಾನ ಹಾಗೂ ಯೋಜನೆಯ ಯಶಸ್ಸಿಗೆ ವಿವಿಧ ಅಂಗಸಂಸ್ಥೆಗಳ ಅನುಭವ ಹಾಗೂ ಪರಿಣತಿಯನ್ನು ಉಪಯೋಗಿಸಿಕೊಂಡು ಸಮನ್ವಯ ಸಾಧಿಸುವುದು ಅತ್ಯಗತ್ಯ. ಈ ಯೋಜನೆಯಡಿ ಅಂಗವಿಕಲರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವ ದೃಷ್ಟಿಯಿಂದ ಈಗಿರುವ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಸಮಿತಿಯನ್ನು ಪುನರ್ ರಚಿಸಲು ಸರ್ಕಾರ ತೀರ್ಮಾನಿಸಿದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿ.26.ಎಸ್‌ಜೆವೈ. 2007 ಬೆಂಗಳೂರು, ದಿನಾಂಕ: 14ನೇ ಜೂನ್ 2007

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಸಮಿತಿಯನ್ನು ಕೆಳಕಂಡಂತೆ ಪುನರ್ ರಚಿಸಲು ಸರ್ಕಾರ ಮಂಜೂರಾತಿಯನ್ನು ನೀಡಿದೆ.

ತಾಲ್ಲೂಕು ಮಟ್ಟದ ಸಮಿತಿ

1.	ಯೋಜನಾ ನಿರ್ದೇಶಕರು, ಡಿಆರ್‌ಡಿಎ, ಜಿಲ್ಲಾ ಪಂಚಾಯತ್	ಅಧ್ಯಕ್ಷರು
2.	ಸಹಾಯಕ ಯೋಜನಾ ಅಧಿಕಾರಿ (ಸ್ವಯಂ ಉದ್ಯೋಗ)	ಸದಸ್ಯರು
3.	ತಾಲ್ಲೂಕಿನಲ್ಲಿರುವ ಎಲ್ಲಾ ಬ್ಯಾಂಕ್‌ಗಳ ಶಾಖಾ ವ್ಯವಸ್ಥಾಪಕರು	ಸದಸ್ಯರು
4.	ತಾಲ್ಲೂಕು ಮಟ್ಟದ ಕೃಷಿ ಅಧಿಕಾರಿ, ಪಶುಸಂಗೋಪನಾ ಅಧಿಕಾರಿ, ಶಿಶು ಅಭಿವೃದ್ಧಿ ಅಧಿಕಾರಿ, ತೋಟಗಾರಿಕೆ ಅಧಿಕಾರಿ ಕೈಗಾರಿಕೆ ವಿಸ್ತೀರ್ಣ ಅಧಿಕಾರಿ, ಮೀನುಗಾರಿಕೆ ಅಧಿಕಾರಿ	ಸದಸ್ಯರು
5.	ಇಲಾಖೆಗಳ ಕ್ಷೇತ್ರ ಮಟ್ಟದ / ಉಪ ವಿಭಾಗ ಮಟ್ಟದ ಅಧಿಕಾರಿಗಳು	ಸದಸ್ಯರು
6.	ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಯ ಸದಸ್ಯರು (ಒಬ್ಬರು)	ಸದಸ್ಯರು
7.	ತಾಲ್ಲೂಕು ಮಟ್ಟದ ಅಧಿಕಾರಿ, ಅಂಗವಿಕಲರ ಕಲ್ಯಾಣ ಇಲಾಖೆ	ಸದಸ್ಯರು
8.	ತಾಲ್ಲೂಕು ಮಟ್ಟದ ಕಪಾರ್ಟ್ ಸಂಸ್ಥೆಯ ಪ್ರತಿನಿಧಿ	ಸದಸ್ಯರು
9.	ತಾಲ್ಲೂಕು ಮಟ್ಟದಲ್ಲಿ ಅಂಗವಿಕಲರ ಸ್ವ ಸಹಾಯ ಸಂಘ ರಚನೆ ಮಾಡುವ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ	ಸದಸ್ಯರು
10.	ಲೀಡ್‌ಡಿಸ್ಟ್ರಿಕ್ಟ್ ಮ್ಯಾನೇಜರ್	ಸದಸ್ಯರು
11.	ವ್ಯವಸ್ಥಾಪಕರು, ನಬಾರ್ಡ್	ಸದಸ್ಯರು
12.	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಸದಸ್ಯರು ಕಾರ್ಯದರ್ಶಿ

ತಾಲ್ಲೂಕು ಮಟ್ಟದ ಸಮಿತಿಯು ಈ ಕೆಳಕಂಡ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

1. ಕಾರ್ಯಕ್ರಮದ ಪ್ರಾರಂಭದಲ್ಲಿ ತಾಲ್ಲೂಕಿನಲ್ಲಿ ತೆಗೆದುಕೊಳ್ಳಬಹುದಾದ key activitiesಯನ್ನು ಆಯ್ಕೆ ಮಾಡುವುದು.
2. ಗ್ರಾಮಗಳ ಆಯ್ಕೆ ಮತ್ತು ಪ್ರತಿ ವರ್ಷ ಆಯ್ಕೆ ಮಾಡಬಹುದಾದ ಸ್ವರೋಜ್‌ಗಾರಿಗಳ ಸಂಖ್ಯೆಗಳ ಆಧಾರದ ಮೇಲೆ ಕ್ರಿಯಾಯೋಜನೆಯನ್ನು ತಯಾರಿಸುವುದು.
3. ಕ್ಲಸ್ಟರ್‌ನ್ನು ಗುರುತಿಸುವುದು ಮತ್ತು ಅನುಷ್ಠಾನಗೊಳಿಸುವುದು.
4. ತಾಲ್ಲೂಕಿನಲ್ಲಿರುವ ಬ್ಯಾಂಕಿಗೆ ಗುರಿಯನ್ನು ನಿಗದಿಪಡಿಸುವುದು.
5. ಗ್ರಾಮಸಭೆಯಲ್ಲಿ ಆಯ್ಕೆಯಾದ ಸ್ವಸಹಾಯ ಸಂಘ / ವೈಯಕ್ತಿಕ ರೋಜ್‌ಗಾರಿ ಅರ್ಜಿಗಳನ್ನು ನಿಗದಿಪಡಿಸಿದ ಎಲ್ಲಾ ಕಾಗದಪತ್ರದೊಂದಿಗೆ ಶಿಫಾರಸ್ಸು ಮಾಡುವುದು.
6. ಸಾಲ ಮಂಜೂರಾದ ಸ್ವ ಸಹಾಯ ಸಂಘಕ್ಕೆ, ನೇರವಾಗಿ ಸಹಾಯಧನವನ್ನು ಬ್ಯಾಂಕಿಗೆ ಬಿಡುಗಡೆ ಮಾಡುವುದು.
7. ವಿವಿಧ ಸಂಸ್ಥೆಗಳ ಕೆಲಸ ಕಾರ್ಯಗಳ ಉಸ್ತುವಾರಿ.
8. ಮೂಲಭೂತ ಸೌಕರ್ಯ ಸಾಲ
9. ತಾಂತ್ರಿಕತೆ ಮತ್ತು ಮಾರುಕಟ್ಟೆಯಲ್ಲಿ ಸಮನ್ವಯ
10. ಸ್ವರೋಜ್‌ಗಾರಿಗಳು ಗಳಿಸಿದ ಆದಾಯದ ಮರು ಪರಿಶೀಲನೆ

11. ವಸೂಲಾತಿಯ ಪ್ರಗತಿ ಪರಿಶೀಲನೆ, ವಸೂಲಾತಿ ಕ್ಯಾಂಪ್‌ಗಳಿಗೆ ದಿನಾಂಕ ಗೊತ್ತುಪಡಿಸುವುದು ಇತ್ಯಾದಿ.
12. ಆಸ್ತಿಯ ಪರಿಶೋಧನೆಯನ್ನು ಮಾಡುವುದು, ಸ್ವರೋಜ್‌ಗಾರಿಗಳು ಬಡತನ ರೇಖೆಯಿಂದ ಮೇಲೆ ಬಂದ ಬಗ್ಗೆ ಪರಿಶೀಲನೆ ಮಾಡುವುದು.

ತಾಲ್ಲೂಕು ಮಟ್ಟದ ಸಮಿತಿಯ ಸಭೆಯನ್ನು ನಿಯತವಾಗಿ ಪ್ರತಿ ಮಾಹೆ ದಿನಾಂಕ 5 ರಿಂದ 10ನೇ ತಾರೀಖಿನೊಳಗೆ ನಡೆಸುವುದು. ಬ್ಯಾಂಕಿನಿಂದ ಬಂದಂತಹ ಮಾಹಿತಿಯನ್ನು ಆಧರಿಸಿ ಮಾಸಿಕ ವರದಿಯನ್ನು ತಯಾರಿಸತಕ್ಕದ್ದು. ಇದನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರೋಢೀಕರಿಸುವುದು. ಈ ನಡವಳಿಯನ್ನು ಜಿಲ್ಲಾ ಪಂಚಾಯಿತಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸತಕ್ಕದ್ದು. ಅದರ ಪ್ರತಿಯನ್ನು ಯೋಜನಾ ನಿರ್ದೇಶಕರು, (ಡಿ.ಆರ್.ಡಿ.ಎ) ಹಾಗೂ ಲೀಡ್ ಬ್ಯಾಂಕ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

ಜಿಲ್ಲಾ ಮಟ್ಟದ ಸಮಿತಿ:

1.	ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್	ಅಧ್ಯಕ್ಷರು
2.	ಜಿಲ್ಲಾ ವ್ಯವಸ್ಥಾಪಕರು, ನಬಾರ್ಡ್	ಸದಸ್ಯರು
3.	ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್.ಬಿ.ಐ.) ಎಲ್.ಡಿ.ಓ.	ಸದಸ್ಯರು
4.	ಜಿಲ್ಲೆಯಲ್ಲಿರುವ ನಿರ್ದೇಶಕರು, ರೂಡ್‌ಸೆಟ್ ಸಂಸ್ಥೆ	
5.	ಎಲ್ಲಾ ಜಿಲ್ಲಾ ಮಟ್ಟದ ಅನುಷ್ಠಾನ ಬ್ಯಾಂಕಿನ ಸಂಯೋಜಕರು	ಸದಸ್ಯರು
6.	ಜಿಲ್ಲಾ ಮಟ್ಟದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪಶು ಸಂಗೋಪನಾ ಇಲಾಖೆ, ಕೃಷಿ ಇಲಾಖೆ, ಕೈಮಗ್ಗ ಮತ್ತು ಜವಳಿ ಇಲಾಖೆ, ಮೀನುಗಾರಿಕೆ ಇಲಾಖೆ.	ಸದಸ್ಯರು
7.	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ	ಸದಸ್ಯರು
8.	ಜಿಲ್ಲಾ ಅಧಿಕಾರಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ	ಸದಸ್ಯರು
9.	ಯೋಜನಾ ನಿರ್ದೇಶಕರು, ಡಿಆರ್‌ಡಿಎ	ಸದಸ್ಯರು
10.	ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಗಳು (ಎನ್.ಜಿ.ಓ)	ಸದಸ್ಯರು
11.	ಜಿಲ್ಲಾ ಮಟ್ಟದ ಅಧಿಕಾರಿ, ಅಂಗವಿಕಲರ ಕಲ್ಯಾಣ ಇಲಾಖೆ	ಸದಸ್ಯರು
12.	ಜಿಲ್ಲೆಯಲ್ಲಿರುವ ಕಪಾರ್ಟ್ ಸಂಸ್ಥೆಯ ಪ್ರತಿನಿಧಿ	ಸದಸ್ಯರು
13.	ಜಿಲ್ಲೆಯಲ್ಲಿ ಅಂಗವಿಕಲರ ಸ್ವಸಹಾಯ ಸಂಘ ರಚನೆ ಮಾಡುವ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿ	ಸದಸ್ಯರು
14.	ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್	ಸದಸ್ಯ ಕಾರ್ಯದರ್ಶಿ

ಜಿಲ್ಲಾ ಮಟ್ಟದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಸಮಿತಿಯು ಕೆಳಕಂಡ ಕೆಲಸಕಾರ್ಯಗಳನ್ನು ನಿರ್ವಹಿಸುತ್ತದೆ.

1. ತಾಲ್ಲೂಕು ಮಟ್ಟದ ಕ್ರಿಯಾಯೋಜನೆಯನ್ನು ಅನುಮೋದಿಸುವುದು ಹಾಗೂ ಜಿಲ್ಲಾ ಮಟ್ಟದ ಕ್ರಿಯಾಯೋಜನೆಯನ್ನು ತಯಾರಿಸುವಾಗ ಜಿಲ್ಲೆಗೆ ಒದಗಿಸಿದ ಅನುದಾನದಲ್ಲಿ ಶೇಕಡಾ 10 ರಷ್ಟು ಸುತ್ತು ನಿಧಿಗೆ ಹಾಗೂ ಶೇಕಡಾ 10ರಷ್ಟು ತರಬೇತಿಗೆ, ಶೇಕಡಾ 20ರಷ್ಟು ಮೂಲಭೂತ ಸೌಕರ್ಯಕ್ಕೆ ಹಂಚಿಕೆ ಮಾಡುವುದು.
2. ಮೂಲಭೂತ ಸೌಕರ್ಯ ಪ್ರಸ್ತಾವನೆಯನ್ನು ಪರಿಶೀಲಿಸುವುದು ಮತ್ತು ಅನುಮೋದನೆ
3. ಪ್ರತೀ ತಾಲ್ಲೂಕಿನಲ್ಲಿ ಮಾರುಕಟ್ಟೆ ಸಂಕೀರ್ಣ ಸ್ಥಾಪನೆ
4. ಬ್ಯಾಂಕಿಗೆ ಗುರಿ ಹಂಚಿಕೆ
5. ಆಯ್ಕೆ ಮಾಡಿದ ಕ್ಲಸ್ಟರ್ ಚಟುವಟಿಕೆಗೆ ಅನುಮೋದನೆ ಮತ್ತು ಅನುಷ್ಠಾನ
6. ಭೌತಿಕ ಮತ್ತು ಆರ್ಥಿಕ ಸಾಧನೆಯ ಪ್ರಗತಿ ಪರಿಶೀಲನೆ
7. ರಾಜ್ಯ ಮಟ್ಟದ ಸಮಿತಿಗೆ ವಿಷಯಗಳ ರವಾನೆ
8. ಜಿಲ್ಲೆಯಲ್ಲಿ ರೂಡ್‌ಸೆಟ್ ಸಂಸ್ಥೆ ಮೂಲಕ ತರಬೇತಿ ನೀಡುವುದು, ಎಟಿಡಿಸಿಗೆ ಅಭ್ಯರ್ಥಿಗಳನ್ನು ತರಬೇತಿಗೆ ನಿಯೋಜಿಸುವುದು.
9. ಸ್ವಸಹಾಯ ಸಂಘಕ್ಕೆ multiple dose ನೀಡಲು ಕ್ರಮ ಕೈಗೊಳ್ಳುವುದು.
10. ಸ್ವ ಸಹಾಯ ಸಂಘಕ್ಕೆ/ವೈಯಕ್ತಿಕ ರೋಜ್‌ಗಾರಿಗಳಿಗೆ ಒಂದು ಭಾಗ ಸಹಾಯ ಧನ, 3 ಭಾಗ ಸಾಲ ಮಂಜೂರು ಆಗಿ ಬಿಡುಗಡೆ ಆಗುವಂತೆ ಕ್ರಮ ವಹಿಸುವುದು (1:3)
11. ಸ್ವ ಸಹಾಯ ಸಂಘ ಉತ್ಪಾದಿಸಿದ ಉತ್ಪಾದನೆಗೆ ಮಾರುಕಟ್ಟೆ ಕಲ್ಪಿಸುವುದು.
12. ವಸೂಲಾತಿ ಪ್ರಗತಿಯನ್ನು ತಾಲ್ಲೂಕುವಾರು ಮತ್ತು ಬ್ಯಾಂಕುವಾರು ಪರಿಶೀಲಿಸಿ, ಅವಶ್ಯಕತೆ ಇದ್ದ ಕಡೆ ಸೂಕ್ತ ಕ್ರಮ ಕೈಗೊಳ್ಳುವುದು.

13. ಎಸ್‌ಜಿಎಸ್‌ವೈ ವಿಶೇಷ ಯೋಜನೆಯ ಹೊಸ ಪ್ರಸ್ತಾವನೆಗಳನ್ನು ಪರಿಶೀಲಿಸಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
14. ಮಂಜೂರಾದ ವಿಶೇಷ ಯೋಜನೆಯ ಪ್ರಗತಿ ಪರಿಶೀಲನೆ.

ಜಿಲ್ಲಾ ಮಟ್ಟದ ಸಮಿತಿ ಪ್ರತಿ ತಿಂಗಳು ಸಭೆ ಸೇರಿ ಎಸ್‌ಜಿಎಸ್‌ವೈ ಪ್ರಗತಿಯನ್ನು ಪರಿಶೀಲಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1139

ಎಂ.ಆರ್. ಶ್ರೀನಿವಾಸಮೂರ್ತಿ,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ.

ವಿಷಯ: ಶಿವಮೊಗ್ಗ, ರಾಯಚೂರು ಜಿಲ್ಲಾ ಪಂಚಾಯತ್ ಹಾಗೂ ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಶಿಕ್ಷಣ ಮತ್ತು ತರಬೇತಿ ಕೇಂದ್ರ ಮತ್ತು ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ಇವರ ಸಹಯೋಗದೊಂದಿಗೆ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ಕುರಿತು.

ಓದಲಾಗಿದೆ:
1 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ರವರ ಪತ್ರ ಸಂ.ಜಿಪರಾ/ಎಸ್‌ಜಿಎಸ್‌ವೈ/ಇನ್‌ಫ್ರಾ/ 2007–08 ದಿನಾಂಕ 30.5.2007.
2 ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಶಿವಮೊಗ್ಗರವರ ಪತ್ರದ ಸಂ. ಜಿಪಂಶಿ/ಎಸ್‌ಜಿಎಸ್‌ವೈ/ವಿವ–40/06–07 ದಿನಾಂಕ: 02.06.2007.

ಪ್ರಸ್ತಾವನೆ:

ಕೃಷಿ ನಂತರ ಹೆಚ್ಚಿನ ಉದ್ಯೋಗ ಒದಗಿಸುವ ಕ್ಷೇತ್ರ ಜವಳಿ ವಲಯವಾಗಿರುತ್ತದೆ. ಸಿದ್ಧ ಉಡುಪು ಕೈಗಾರಿಕೆಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು, ಉಳಿದ ಜಿಲ್ಲೆಗಳಲ್ಲಿ ಸಿದ್ಧ ಉಡುಪು ತಯಾರಿಕೆಯಲ್ಲಿ ನುರಿತ ಕೆಲಸಗಾರರು ಸಿಗದ ಪ್ರಯುಕ್ತ ಸಿದ್ಧ ಉಡುಪು ಘಟಕಗಳು ವಿವಿಧ ಜಿಲ್ಲೆಗಳಲ್ಲಿ ಸ್ಥಾಪನೆಯಾಗುತ್ತಿಲ್ಲ. ವಿವಿಧ ಜಿಲ್ಲೆಗಳಲ್ಲಿ ಸಿದ್ಧ ಉಡುಪು ಘಟಕಕ್ಕೆ ಅವಶ್ಯವಿರುವ ನುರಿತ ಕೆಲಸಗಾರರನ್ನು ತಯಾರು ಮಾಡುವುದು ಹಾಗೂ ಜಿಲ್ಲೆಯಲ್ಲಿ ಸಿದ್ಧ ಉಡುಪು ಉದ್ಯಮಕ್ಕೆ ಬೇಡಿಕೆ ಸೃಷ್ಟಿಸುವುದು ಅವಶ್ಯವಿರುತ್ತದೆ ಹಾಗೂ ಎಸ್‌ಜಿಎಸ್‌ವೈ ಯೋಜನೆಯಲ್ಲಿ ಸ್ವ ಉದ್ಯೋಗ ಸೃಷ್ಟಿಸುವುದು ಅವಶ್ಯವಿರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುವ ಸ್ವಯಂ ಸೇವಾ ಸಂಸ್ಥೆ ಜೊತೆ ತರಬೇತಿಯು ಪ್ರಾರಂಭಿಸುವ ಉದ್ದೇಶ ರಾಜ್ಯ ಸರ್ಕಾರ ಹೊಂದಿರುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಯಚೂರು ಮತ್ತು ಶಿವಮೊಗ್ಗ ಇವರ ಸ್ಥಳ ಪರಿಶೀಲನೆ ಮಾಡಿ ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಶಿಕ್ಷಣ ಮತ್ತು ತರಬೇತಿ ಕೇಂದ್ರ ಮತ್ತು ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ಈ ಸಂಸ್ಥೆಯು ನಂಬಿಕೆಗೆ ಅರ್ಹವಾದ ನಿಸ್ವಾರ್ಥ ಸೇವೆ ಬಗ್ಗೆ ಹಾಗೂ ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಶಿಫಾರಸ್ಸು ಮಾಡಿರುತ್ತಾರೆ. ಈ ಸಂಸ್ಥೆಗಳಲ್ಲಿ Sewing Machine Operator Course, ಪ್ರಾರಂಭಿಸುವ ಬಗ್ಗೆ ದಿನಾಂಕ: 15.6.2007ರಂದು ತಾಂತ್ರಿಕ ಸಮಿತಿಯು ತರಬೇತಿ ಮತ್ತು ಉತ್ಪಾದನಾ ಕೇಂದ್ರಕ್ಕೆ ಅವಶ್ಯವಿರುವ ಯಂತ್ರೋಪಕರಣ ಹಾಗೂ ಇತರೆ accessories ಗಳ ಬಗ್ಗೆ ನಿಗದಿಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತದೆ. ರಾಯಚೂರು ಜಿಲ್ಲೆಯ ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಶಿಕ್ಷಣ ಮತ್ತು ತರಬೇತಿ ಕೇಂದ್ರ ಇವರ ಸಹಯೋಗದೊಂದಿಗೆ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಬೇಕಾಗಿದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ.30.ಎಸ್‌ಜಿಐ 2007 ಬೆಂಗಳೂರು, ದಿನಾಂಕ: 16ನೇ ಜೂನ್ 2007

ರಾಜ್ಯ ಸರ್ಕಾರ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ರಾಯಚೂರು ಜಿಲ್ಲೆಯ ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲಾ ಕೈಗಾರಿಕಾ ಶಿಕ್ಷಣ ಮತ್ತು ತರಬೇತಿ ಕೇಂದ್ರ ಇವರ ಸಹಯೋಗದೊಂದಿಗೆ ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರವನ್ನು ಈ ಕೆಳಗೆ ಕಾಣಿಸಿದ ಷರತ್ತುಗಳೊಂದಿಗೆ ಪ್ರಾರಂಭಿಸಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಸ್ಥಳ	ಯಂತ್ರೋಪಕರಣಕ್ಕೆ ಅನುದಾನ (ರೂ. ಲಕ್ಷಗಳಲ್ಲಿ)	ಆವರ್ತಕ ವೆಚ್ಚ
1.	ರಾಯಚೂರು	ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ತಾಲ್ಲೂಕು	15.50	ಗರಿಷ್ಠ ರೂ. 4.00 ಲಕ್ಷವನ್ನು ಕಪಾರ್ಟ್ ಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಿ ಪಡೆಯುವುದು

2.	ಶಿವಮೊಗ್ಗ	ಜಿಲ್ಲಾ ಕೈಗಾರಿಕಾ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಹಿಂಭಾಗ, ನೆಹರೂ ರಸ್ತೆ, ಶಿವಮೊಗ್ಗ	15.50	ಗರಿಷ್ಠ ರೂ. 4.00 ಲಕ್ಷವನ್ನು ಎಸ್‌ಜಿಎಸ್‌ವೈ ತರಬೇತಿ ಅನುದಾನದಿಂದ ಭರಿಸುವುದು.

ಷರತ್ತುಗಳು:

1. ಸಿದ್ಧ ಉಡುಪು ತರಬೇತಿ ಮತ್ತು ಉತ್ಪಾದನಾ ಕೇಂದ್ರಕ್ಕೆ ಭೂಮಿ ಮತ್ತು ಕಟ್ಟಡ ಅನುದಾನ ನೀಡಲು ಅವಕಾಶವಿರುವುದಿಲ್ಲ.
2. ಸಿದ್ಧ ಉಡುಪು ಮತ್ತು ತರಬೇತಿ ಉತ್ಪಾದನಾ ಕೇಂದ್ರವನ್ನು ಕನಿಷ್ಠ 10 ವರ್ಷ ಸ್ವಯಂ ಸೇವಾ ಸಂಸ್ಥೆಗಳು ಕಡ್ಡಾಯವಾಗಿ ನಡೆಸಬೇಕು.
3. ಸ್ವಯಂ ಸೇವಾ ಸಂಸ್ಥೆಯ ಸ್ವಂತ ಕಟ್ಟಡಕ್ಕೆ ಬಾಡಿಗೆಯನ್ನು ಹಾಕತಕ್ಕದ್ದಲ್ಲ.
4. ಪ್ರತ್ಯೇಕವಾಗಿ ಪುರುಷರಿಗೆ ಮತ್ತು ಮಹಿಳೆಯರಿಗೆ ಶೌಚಾಲಯ ಮತ್ತು ನೀರಿನ ವ್ಯವಸ್ಥೆ ಮಾಡುವುದು.
5. ತರಬೇತಿ ಕೇಂದ್ರಕ್ಕೆ 4000 ಚದರ ಅಡಿ X 20 ಕೆವಿಎ ವಿದ್ಯುಚ್ಛಕ್ತಿ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ಸೌಲಭ್ಯ ಒದಗಿಸುವುದು.
6. ಎಸ್‌ಜಿಎಸ್‌ವೈ ಯೋಜನೆಯ ಮೂಲಭೂತ ಸೌಕರ್ಯದಡಿ ಯಂತ್ರೋಪಕರಣವನ್ನು ನೀಡಲಾಗುತ್ತಿದ್ದು ಸಂಸ್ಥೆಯವರು ಅನಿವಾರ್ಯ ಕಾರಣದಿಂದ ತರಬೇತಿ ಕೇಂದ್ರವನ್ನು ಸ್ಥಗಿತಗೊಳಿಸಿದರೆ ಯಂತ್ರೋಪಕರಣವನ್ನು ಬೇರೆ ಕೇಂದ್ರಕ್ಕೆ ವರ್ಗಾಯಿಸುವ ಅಥವಾ ಸದರಿ ಸಂಸ್ಥೆಯ ಕಟ್ಟಡದಲ್ಲಿಯೇ ಬಾಡಿಗೆಯ ಆಧಾರದ ಮೇಲೆ ನಡೆಸುವ ಅಧಿಕಾರ ಜಿಲ್ಲಾ ಪಂಚಾಯತಿಗಿರುತ್ತದೆ. ಇದರ ಬಗ್ಗೆ ಜಿಲ್ಲಾ ಪಂಚಾಯತ್ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
7. ತರಬೇತಿ ಅವಧಿಯಲ್ಲಿ ಎಸ್‌ಜಿಎಸ್‌ವೈ ಯೋಜನೆಯಿಂದ ಶಿಷ್ಯವೇತನ ನೀಡಲು ಅವಕಾಶವಿರುವುದಿಲ್ಲ.
8. ಈ ತರಬೇತಿ ಮತ್ತು ಉತ್ಪಾದನಾ ಕೇಂದ್ರವು ಅಪೆರಲ್ ಟ್ರೈನಿಂಗ್ ಮತ್ತು ಡಿಸೈನ್ ಸೆಂಟರ್ (ATDC), ಬೆಂಗಳೂರು ಇವರು ಅಳವಡಿಸಿದ 1) ಪಠ್ಯಕ್ರಮ 2) ಯಂತ್ರೋಪಕರಣ 3) ತರಬೇತಿಯ ಗುಣಮಟ್ಟವನ್ನು ಬೆಂಚ್ ಮಾರ್ಕ್ ಆಗಿ ಇಟ್ಟುಕೊಂಡು ಈ ಮಾದರಿಯಲ್ಲಿ ತರಬೇತಿ ಕೇಂದ್ರವನ್ನು ಸ್ಥಾಪಿಸತಕ್ಕದ್ದು.
9. ತರಬೇತಿ ಮತ್ತು ಉತ್ಪಾದನಾ ಕೇಂದ್ರದ ಡಿಸೈನ್ ಮತ್ತು ಅವಶ್ಯವಿರುವ ಯಂತ್ರೋಪಕರಣಗಳ ಹಾಗೂ ಸಿಬ್ಬಂದಿಯ ನೇಮಕಾತಿ ಹಾಗೂ ಇತರೆ ವಿಷಯಗಳ ಬಗ್ಗೆ ಶ್ರೀ, ಬಾಲಾಜಿ, ಜಂಟಿ ನಿರ್ದೇಶಕರು, ATDC ಬೆಂಗಳೂರು ಅಥವಾ ಶ್ರೀಮತಿ ಗಾಯಿತ್ರಿ ಕನ್ಸಲ್‌ಟೆಂಟ್ ಇವರ ಸೇವೆಯನ್ನು ಸಲಹೆಗಾಗಿ ಬಳಸಿಕೊಳ್ಳಬಹುದು.
10. ಕೇಂದ್ರ ನಡೆಸಲು ವರ್ಷಕ್ಕೆ ನೈಜವಾಗಿ ತಗಲುವ ಆವರ್ತಕ ವೆಚ್ಚ (Recurring Expenditure) ಶೇಕಡ 50ರಷ್ಟು ಜಿಲ್ಲಾ ಪಂಚಾಯತ್ ಶಿವಮೊಗ್ಗದಿಂದ ಉಳಿದ ಶೇಕಡ 50ರಷ್ಟು ವೆಚ್ಚವನ್ನು ತರಬೇತಿ ಪಡೆಯುವ ಅಭ್ಯರ್ಥಿಗಳಿಂದ ಶುಲ್ಕವಾಗಿ ವಸೂಲಿ ಮಾಡುವ ಮೂಲಕ ಸಂಸ್ಥೆ ಭರಿಸುವುದು. 3 ವರ್ಷದವರೆಗೆ ಈ ವ್ಯವಸ್ಥೆ ಇರುತ್ತದೆ. ನಂತರ ಸ್ವಯಂ ಸೇವಾ ಸಂಸ್ಥೆಯೇ ಪೂರ್ತಿಯಾಗಿ ಆವರ್ತಕ ವೆಚ್ಚವನ್ನು ಭರಿಸತಕ್ಕದ್ದು.
11. ಎಸ್‌ಎಲ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಯರಮರಸ್, ರಾಯಚೂರು ತಾಲ್ಲೂಕಿನಲ್ಲಿ ತರಬೇತಿ ಮತ್ತು ಉತ್ಪಾದನಾ ಕೇಂದ್ರ ನಡೆಸಲು ವರ್ಷಕ್ಕೆ ನೈಜವಾಗಿ ತಗಲುವ ಆವರ್ತಕ ವೆಚ್ಚ (Recurring Expenditure) ಶೇಕಡ 50ರಷ್ಟು ವೆಚ್ಚವನ್ನು ತರಬೇತಿ ಪಡೆಯುವ ಅಭ್ಯರ್ಥಿಗಳಿಂದ ಶುಲ್ಕವಾಗಿ ವಸೂಲಿ ಮಾಡುವ ಮೂಲಕ ಸಂಸ್ಥೆ ಭರಿಸುವುದು. ಹಾಗೂ ಉಳಿದ ವೆಚ್ಚವನ್ನು ಗರಿಷ್ಠ ರೂ. 4.00 ಲಕ್ಷವನ್ನು ಕಪಾರ್ಟ್ ಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಿ ಪಡೆಯುವುದು.
12. ಸದರಿ ತರಬೇತಿ ಮತ್ತು ಉತ್ಪಾದನಾ ಕೇಂದ್ರದಲ್ಲಿ ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ, ಡಿ. ದೇವರಾಜ ಅರಸ್ ಅಭಿವೃದ್ಧಿ ನಿಗಮ, ಕೈಮಗ್ಗ ಮತ್ತು ಜವಳಿ ಇಲಾಖೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯ ಫಲಾನುಭವಿಗಳು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಫಲಾನುಭವಿಗಳು ಹಾಗೂ ಇತರೆ ಇಲಾಖೆಯ ಯೋಜನೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ತರಬೇತಿ ನೀಡುವುದು. ತರಬೇತಿ ಅವಧಿಯನ್ನು ಹಾಗೂ ತರಬೇತಿಯ course fee ಯನ್ನು (ಎಸ್‌ಜಿಎಸ್‌ವೈ ಹೊರತುಪಡಿಸಿ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಜಿಲ್ಲಾ ಪಂಚಾಯತ್ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಜೊತೆ ಸೇರಿ ನಿರ್ಧರಿಸುವುದು.
13. ಯಂತ್ರೋಪಕರಣ ಖರೀದಿಗೆ ಗರಿಷ್ಠ ರೂ. 15.50 ಲಕ್ಷ ನಿಗದಿಪಡಿಸಿದ್ದು ಅದಕ್ಕಿಂತ ಕಡಿಮೆ ನೈಜ ವೆಚ್ಚವಾಗಿದ್ದರೆ, ನೈಜ ವೆಚ್ಚವನ್ನು ಮಾತ್ರ ಪಾವತಿಸುವುದು.
14. ಯಂತ್ರೋಪಕರಣ ಖರೀದಿಯಲ್ಲಿ ಪಾರದರ್ಶಕ ಕಾಯಿದೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
15. ಸಂಸ್ಥೆಗೆ ಬೇಕಾದ ಸಿಬ್ಬಂದಿಯನ್ನು ತಾಂತ್ರಿಕ ನೈಪುಣ್ಯತೆಯ ಆಧಾರದ ಮೇಲೆ ನೇಮಿಸುವ ಜವಾಬ್ದಾರಿ ಜಿಲ್ಲಾ ಪಂಚಾಯತ್ ಮತ್ತು ಸ್ವಯಂ ಸೇವಾ ಸಂಸ್ಥೆಯದಾಗಿರುತ್ತದೆ.
16. ಪ್ರತಿ ತಿಂಗಳು ಕನಿಷ್ಠ 50 ಅಭ್ಯರ್ಥಿಗಳಿಗೆ ತರಬೇತಿ ನೀಡುವುದು.

17. ಜಿಲ್ಲಾ ಮಟ್ಟದಲ್ಲಿ ಉಸ್ತುವಾರಿ ಸಮಿತಿಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ರಚನೆ ಮಾಡಲಾಗಿದೆ. ಈ ಸಮಿತಿಯು ಪ್ರತಿ ತಿಂಗಳು ಸಭೆ ನಡೆಸುವುದು.
18. ರಾಜ್ಯ ಮಟ್ಟದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಪ್ರತಿ 3 ತಿಂಗಳಿಗೊಮ್ಮೆ ಸಭೆ ನಡೆಸುವುದು.
19. ಯಂತ್ರೋಪಕರಣ ವೆಚ್ಚವನ್ನು ಎಸ್‌ಜಿಎಸ್‌ವೈ ಯೋಜನೆಯ ಮೂಲಭೂತ ಸೌಕರ್ಯ ನಿಧಿಯಿಂದ ಭರಿಸುವುದು. ಈ ಯಂತ್ರೋಪಕರಣಗಳು ಜಿಲ್ಲಾ ಪಂಚಾಯತಿ ಆಸ್ತಿಯಾಗಿದ್ದು ರಿಜಿಸ್ಟರ್‌ನಲ್ಲಿ ದಾಖಲೆ ಮಾಡುವುದು.
20. ಕೇಂದ್ರ ಪ್ರಾರಂಭ ಆದ ನಂತರ "ರೂಡ್‌ಸೆಟ್ ಸಂಸ್ಥೆ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಸ್ಥಾಪಿಸಲ್ಪಟ್ಟ ತರಬೇತಿ ಮತ್ತು ಉತ್ಪಾದನಾ ಕೇಂದ್ರವೆಂದು ಬೋರ್ಡ್ ಹಾಕುವುದು".
21. ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಅವಶ್ಯವಿರುವ ಎಲ್ಲಾ ಸಿದ್ದತೆಗಳನ್ನು ತಕ್ಷಣದಿಂದ ಮಾಡಿಕೊಂಡು ಜೂನ್ 2007ರಲ್ಲಿ ಪ್ರಾರಂಭಿಸಲು ಎಲ್ಲ ಕ್ರಮ ಕೈಗೊಳ್ಳುವುದು.
22. ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಅಂದಾಜು ವೆಚ್ಚ ಅಗತ್ಯವಿರುವ ಯಂತ್ರೋಪಕರಣಗಳು, ಪೀಠೋಪಕರಣಗಳು, ಸಲಕರಣೆಗಳು ಮತ್ತು ವಿದ್ಯುತ್ ಸಲಕರಣೆಗಳ ಬಗ್ಗೆ ವಿವರಗಳನ್ನು ಅನುಬಂಧ–ಎ ರಲ್ಲಿ ಮತ್ತು ಸಂಸ್ಥೆಯ ಸಿಬ್ಬಂದಿ ಹಾಗೂ ಆವರ್ತಕ ವೆಚ್ಚದ ವಿವರಗಳನ್ನು ಅನುಬಂಧ–ಬಿ ರಲ್ಲಿ ವಿವರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಆರ್. ಶ್ರೀನಿವಾಸಮೂರ್ತಿ
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ANNEXURE-I
Details of Machinery and Office Equipment

Sl. No.	Particulars	Quantity	Approximate Amount Estimated
I.	**High Speed Indl. Sewing M/c**		
1.	Single Needle Lock Stitch M/c	30	450000
	Button Hole M/C	1	130000
2.	Button Stitch M/C	1	80000
3.	Operator Stools	32	20000
4.	Ironing Table with steam iron	1	35000
5.	St. Knife cutting machine	1	50000
6.	Electrical Installation including KEB Deposit		200000
	Total		**965000**
II.	**OFFICE EQUIPMENTS**		
1.	Office Furniture		15000
2.	Godrej Steel Cubboard		10000
3.	Godrej Slotted Angles		7500
4.	PM Tables		10000
5.	Notice Board		6000
6.	Dress forms	4	40000
7.	Ceramic Green Board		10000
8.	Genset (20 KVA)		450000
9.	Miscellaneous		36500
	Total		685000
	Grand Total		**1550000**

Annexure-II
Details of recurring expenditure

Sl. No.	No. of Posts	No. of Posts	Salary month (Rs.)	Salary per month (Rs.)	Total salary per annum (Rs. In lakhs)
1.	Instructor	2	6000	6000	1.44

2.	Machine Mechanic	1	3000	3000	0.36
3.	Data Entry Operator	1	2500	2500	0.30
4.	Peon	1	2000	2000	0.24
5.	Teaching Materials to students @ 250/- per student annum for 600 students				1.50
6.	Stationery & Miscellaneous expenses @ 10000/- per month for 12 months				1.20
7.	Operational expenses including maintenance of building, machinery, cost of utilities viz., power, diesel, water, telephone, postage etc.,				3.00
	Total				**8.04**

PR 1138

Joint Director (SEP)
RD&PR Dept.

ವಿಷಯ: ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್ (ATDC) ಬಗ್ಗೆ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ರಚನೆ

ಓದಲಾಗಿದೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:18.11.2006 ರಂದು ನಡೆದ ಎಸ್‌ಜಿಎಸ್‌ವೈ ಯೋಜನೆಯ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸಭೆಯ ನಡವಳಿ
2. ಮೈಸೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಮೈಜಿಪ/ಡಿಆರ್‌ಡಿಎ/1/ಎಸ್‌ಜಿಎಸ್‌ವೈ/6/06–07 ದಿನಾಂಕ: 5.12.06.
3. ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಜಿಪಂಹಾ/ಎಸ್‌ಜಿಎಸ್‌ವೈ/ಸಿಆರ್/50/2006–07 ದಿನಾಂಕ: 28.11.2006
4. ಧಾರವಾಡ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಧಾಜಿಪಂ/ಯೊನಿ/ಎಟಿಡಿಸಿ/2006–07 ದಿನಾಂಕ 28.11.2006.
5. ತುಮಕೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ತುಜಿಪಂ/ಪಿಡಿ/ ಡಿಆರ್‌ಡಿಎ/ಎಸ್‌ಜಿಎಸ್‌ವೈ/ಸಿಆರ್/6/2006–07 ದಿನಾಂಕ: 6.12.2006.
6. ಬಾಗಲಕೋಟೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಜಿಪಂಬಾ/ಪಿಡಿ/ಎಸ್‌ಜಿಎಸ್‌ವೈ/ಎಟಿಡಿಸಿ/ಸಿಆರ್–38/2006–07 ದಿನಾಂಕ: 11.12.2006.
7. ಎಟಿಡಿಸಿಯ ಉಪ ಪ್ರಧಾನ ನಿರ್ದೇಶಕರವರ ಪತ್ರದ ಸಂ. ATDC/HO/BNG/RDPR/ TRG/2006/12 ದಿನಾಂಕ: 18.12.2006.

ಪ್ರಸ್ತಾವನೆ:

ಕೃಷಿ ನಂತರ ಹೆಚ್ಚಿನ ಉದ್ಯೋಗ ಒದಗಿಸುವ ಕ್ಷೇತ್ರ ಜವಳಿ ವಲಯವಾಗಿರುತ್ತದೆ. ಸಿದ್ದ ಉಡುಪು ಕೈಗಾರಿಕೆಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು ಉಳಿದ ಜಿಲ್ಲೆಗಳಲ್ಲಿ ಸಿದ್ದ ಉಡುಪು ತಯಾರಿಕೆಯಲ್ಲಿ ನುರಿತ ಕೆಲಸಗಾರರು ಸಿಗದ ಪ್ರಯುಕ್ತ ಸಿದ್ಧ ಉಡುಪು ಘಟಕಗಳು ಬೇರೆ ಜಿಲ್ಲೆಯಲ್ಲಿ ಸ್ಥಾಪನೆಯಾಗುತ್ತಿಲ್ಲ.

ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್ ಸ್ಥಾಪನೆಗೆ ಎಸ್‌ಜಿಎಸ್‌ವೈ ಯೋಜನೆಯ ಮೂಲಭೂತ ಸೌಕರ್ಯ ನಿಧಿಯಿಂದ, ಯಂತ್ರೋಪಕರಣಗಳು ಹಾಗೂ ತರಬೇತಿ ನಿಧಿಯಿಂದ 3 ವರ್ಷಗಳವರೆಗೆ ಆವರ್ತಕ ವೆಚ್ಚವನ್ನು ಶೇ. 50ರಷ್ಟು ಮಾತ್ರ ಭರಿಸಲು ಆದೇಶಿಸಲಾಗಿದೆ. ಈ ತರಬೇತಿ ಕೇಂದ್ರಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವ ದೃಷ್ಟಿಯಿಂದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಗ್ರಾಅಪ.131.ಎಸ್‌ಜಿಐ.2006 ಬೆಂಗಳೂರು, ದಿನಾಂಕ: 15ನೇ ಜೂನ್ 2007

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್/ತರಬೇತಿ ಮತ್ತು ಸಿದ್ಧ ಉಡುಪು ಕೇಂದ್ರ ಕಾರ್ಯನಿರ್ವಹಣೆ ಸಮರ್ಪಕವಾಗಿ ನಡೆಸುವ ದೃಷ್ಟಿಯಿಂದ ಸರ್ಕಾರ ಜಿಲ್ಲಾ ಮಟ್ಟದ ಸಮಿತಿಯನ್ನು ಕೆಳಕಂಡಂತೆ ರಚಿಸಲು ಮಂಜೂರಾತಿ ನೀಡಿದೆ.

1.	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್	ಅಧ್ಯಕ್ಷರು
2.	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ	ಸದಸ್ಯರು
3.	ಪ್ರಾಂಶುಪಾಲರು, ಎಟಿಡಿಸಿ	ಸದಸ್ಯರು

4.	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	ಸದಸ್ಯರು
5.	ಜಿಲ್ಲಾ ಮಟ್ಟದ ಅಧಿಕಾರಿ, ದೇವರಾಜ್ ಅರಸು ನಿಗಮ ನಿಯಮಿತ	ಸದಸ್ಯರು
6.	ಜಿಲ್ಲಾ ಮಟ್ಟದ ಅಧಿಕಾರಿ, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ	ಸದಸ್ಯರು
7.	ಜಿಲ್ಲಾ ಮಟ್ಟದ ಅಧಿಕಾರಿ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ	ಸದಸ್ಯರು
8.	ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ	ಸದಸ್ಯರು
9.	ಅಧ್ಯಕ್ಷರು, ಜಿಲ್ಲೆಯ ಕೈಗಾರಿಕೆ ಅಸೋಷಿಯೇಷನ್	ಸದಸ್ಯರು
10.	ನಿರ್ದೇಶಕರು, ಸ್ಥಳೀಯ ಸಿದ್ಧ ಉಡುಪು ಕೈಗಾರಿಕೆ ಉದ್ಯಮಿದಾರರು	ಸದಸ್ಯರು
11.	ನಿರ್ದೇಶಕರು, ರೂಡ್‌ಸೆಟ್	ಸದಸ್ಯರು
12.	ಸಂಬಂಧಪಟ್ಟ ಸ್ವಯಂ ಸೇವಾ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರು	ಸದಸ್ಯರು
13.	ಅಧ್ಯಕ್ಷರು, Apparel Export Promotion Council (AEPC) ಬೆಂಗಳೂರು	ಸದಸ್ಯರು
14.	ಜಿಲ್ಲೆಯ ಕಪಾರ್ಟ್ ಪ್ರತಿನಿಧಿ	ಸದಸ್ಯರು
15.	ಯೋಜನಾ ನಿರ್ದೇಶಕರು, ಡಿಆರ್‌ಡಿಎ	ಸದಸ್ಯ ಕಾರ್ಯದರ್ಶಿ

ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು ನಿರ್ವಹಿಸಬೇಕಾದ ಕಾರ್ಯಗಳು:

1. ವರ್ಷದ ಪ್ರಾರಂಭದಲ್ಲಿ ಕ್ರಿಯಾಯೋಜನೆಯನ್ನು ತಯಾರಿಸಿ ಅನುಮೋದಿಸುವುದು.
2. ಸಂಸ್ಥೆಗೆ ಬೇಕಾದ ವಿವಿಧ ಮೂಲಗಳಿಂದ ಕ್ರೋಢೀಕರಣ.
3. ಶಿಕ್ಷಾರ್ಥಿಗಳ ಅಯ್ಕೆ ಬಗ್ಗೆ calendar of events
4. ಲೆಕ್ಕಪತ್ರ ಪರಿಶೀಲನೆ
5. ಜಿಲ್ಲೆಯಲ್ಲಿ ದೊಡ್ಡ ಘಟಕದೊಂದಿಗೆ ಸಮನ್ವಯ ಬೆಳೆಸಿ ಘಟಕ ಸ್ಥಾಪನೆ ಬಗ್ಗೆ ಕ್ರಮ
6. ಜಿಲ್ಲೆಯಲ್ಲಿ ಸಿದ್ಧ ಉಡುಪು ಘಟಕ ಸ್ಥಾಪಿಸಲು ಉತ್ತೇಜನ ನೀಡುವುದು
7. ಜಿಲ್ಲೆಯಲ್ಲಿ ಅಪೆರಲ್ ಪಾರ್ಕ್ ಸ್ಥಾಪನೆ ಬಗ್ಗೆ ಜವಳಿ ಆಯುಕ್ತರ ಜೊತೆ ಸಂಪರ್ಕ ಬೆಳೆಸುವುದು

ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯು ಪ್ರತಿ ತಿಂಗಳು ಕಡ್ಡಾಯವಾಗಿ ಸಭೆ ನಡೆಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1137

ಎಂ.ಆರ್. ಶ್ರೀನಿವಾಸಮೂರ್ತಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಿಷಯ: ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್ (ATDC) ಬಗ್ಗೆ ರಾಜ್ಯ ಮಟ್ಟದ ಸಮನ್ವಯ ಸಮಿತಿ ರಚನೆ.

ಓದಲಾಗಿದೆ:

1 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:18.11.2006 ರಂದು ನಡೆದ ಎಸ್‌ಜಿಎಸ್‌ವೈ ಯೋಜನೆಯ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸಭೆಯ ನಡವಳಿ

2 ಮೈಸೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಮೈಜಿಪ/ಡಿಆರ್‌ಡಿಎ/1/ಎಸ್‌ಜಿಎಸ್‌ವೈ/6/06–07 ದಿನಾಂಕ: 5.12.06.

3 ಹಾಸನ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಜಿಪಂಹಾ/ಎಸ್‌ಜಿಎಸ್‌ವೈ/ಸಿಆರ್/50/2006–07 ದಿನಾಂಕ: 28.11.2006

4 ಧಾರವಾಡ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಧಾಜಿಪಂ/ಯೊನಿ/ಎಟಿಡಿಸಿ/2006–07 ದಿನಾಂಕ 28.11.2006.

5 ತುಮಕೂರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ತುಜಿಪಂ/ಪಿಡಿ/ ಡಿಆರ್‌ಡಿಎ/ಎಸ್‌ಜಿಎಸ್‌ವೈ/ಸಿಆರ್/6/2006–07 ದಿನಾಂಕ: 6.12.2006.

6 ಬಾಗಲಕೋಟೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರ ಪತ್ರ ಸಂ. ಜಿಪಂಬಾ/ಪಿಡಿ/ಎಸ್‌ಜಿಎಸ್‌ವೈ/ಎಟಿಡಿಸಿ/ಸಿಆರ್–38/2006–07 ದಿನಾಂಕ: 11.12.2006.

7 ಎಟಿಡಿಸಿಯ ಉಪ ಪ್ರಧಾನ ನಿರ್ದೇಶಕರವರ ಪತ್ರದ ಸಂ. ATDC/HO/BNG/RDPR/TRG/2006/12 ದಿನಾಂಕ: 18.12.2006.

ಪ್ರಸ್ತಾವನೆ:

ಕೃಷಿ ನಂತರ ಹೆಚ್ಚಿನ ಉದ್ಯೋಗ ಒದಗಿಸುವ ಕ್ಷೇತ್ರ ಜವಳಿ ವಲಯವಾಗಿರುತ್ತದೆ. ಸಿದ್ದ ಉಡುಪು ಕೈಗಾರಿಕೆಗಳು ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತವಾಗಿದ್ದು ಉಳಿದ ಜಿಲ್ಲೆಗಳಲ್ಲಿ ಸಿದ್ದ ಉಡುಪು ತಯಾರಿಕೆಯಲ್ಲಿ ನುರಿತ ಕೆಲಸಗಾರರು ಸಿಗದ ಪ್ರಯುಕ್ತ ಸಿದ್ಧ ಉಡುಪು ಘಟಕಗಳು ಬೇರೆ ಜಿಲ್ಲೆಯಲ್ಲಿ ಸ್ಥಾಪನೆಯಾಗುತ್ತಿಲ್ಲ.

ಜಿಲ್ಲೆಯಲ್ಲಿ ನುರಿತ ಕೆಲಸಗಾರರು ಈ ಕ್ಷೇತ್ರದಲ್ಲಿ ತಯಾರಿರುವ ಹಿನ್ನಲೆಯಲ್ಲಿ 1) ಮೈಸೂರು 2) ಮಂಡ್ಯ 3) ರಾಮನಗರ 4) ಕೋಲಾರ 5) ಚಿಕ್ಕಬಳ್ಳಾಪುರ 6) ತುಮಕೂರು 7) ಹಾಸನ 8) ಉಡುಪಿ 9) ಕೊಪ್ಪಳ 10) ಗುಲ್ಬರ್ಗ 11) ಬೆಳಗಾಂ 12) ಧಾರವಾಡ 13) ದಕ್ಷಿಣ ಕನ್ನಡ ಮತ್ತು 14) ಬಾಗಲಕೋಟೆಗಳಲ್ಲಿ ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್‌ನ್ನು ಸ್ಥಾಪಿಸಲು ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸುವ ಸರ್ಕಾರೇತರ ಸಂಸ್ಥೆ ಜೊತೆಗೆ ಸೇರಿ ಎಟಿಡಿಸಿ ಮಾದರಿಯ ತರಬೇತಿ ಕೇಂದ್ರವನ್ನು ಜೆಎಸ್‌ಎಸ್, ಮೈಸೂರು, ಬಿವಿವಿ ಸ್ಟೆಪ್, ಬಾಗಲಕೋಟೆ, ತರಳಬಾಳು ಸಂಸ್ಥೆ, ಸಿರಿಗೆರೆ, ಚನ್ನಗಿರಿ, ಕುಮಾರೇಶ್ವರ ಟ್ರಸ್ಟ್, ಹಾನಗಲ್, ಸೇವಾ ಸಂಸ್ಥೆ, ಹೂವಿನಹಡಗಲಿಯಲ್ಲಿ ಸ್ಥಾಪಿಸಲು ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ.

ಮೇಲ್ಕಂಡ ಕೇಂದ್ರಗಳ ಸ್ಥಾಪನೆಗೆ ಎಸ್‌ಜಿಎಸ್‌ವೈ ಮೂಲಭೂತ ಸೌಕರ್ಯ ನಿಧಿಯಿಂದ, ಯಂತ್ರೋಪಕರಣಗಳು ಹಾಗೂ ತರಬೇತಿ ನಿಧಿಯಿಂದ 3 ವರ್ಷಗಳವರೆಗೆ ಶೇ. 50ರಷ್ಟು ಆವರ್ತಕ ವೆಚ್ಚವನ್ನು ಭರಿಸಲು ಆದೇಶಿಸಲಾಗಿದೆ. ಈ ತರಬೇತಿ ಕೇಂದ್ರಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವ ದೃಷ್ಟಿಯಿಂದ ರಾಜ್ಯ ಮಟ್ಟದ ಸಮನ್ವಯ ಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ.

ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂ: ಗ್ರಾಅಪ 131.ಎಸ್‌ಜಿಐ.2006 ಬೆಂಗಳೂರು, ದಿನಾಂಕ: 15ನೇ ಜೂನ್ 2007

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಎಟಿಡಿಸಿ ಹಾಗೂ ಎಟಿಡಿಸಿ ಮಾದರಿಯ ಸಂಸ್ಥೆಗಳ ಕಾರ್ಯನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿರುವುದನ್ನು ಪರಿಶೀಲಿಸುವ ಸಲುವಾಗಿ ಸರ್ಕಾರ ರಾಜ್ಯ ಮಟ್ಟದ ಸಮನ್ವಯ ಸಮಿತಿಯನ್ನು ಕೆಳಕಂಡಂತೆ ರಚಿಸಲು ಮಂಜೂರಾತಿ ನೀಡಿದೆ.

1.	ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು	ಅಧ್ಯಕ್ಷರು
2.	ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು	ಸದಸ್ಯರು
3.	ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
4.	ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
5.	ಡೆಪ್ಯುಟಿ ಡೈರೆಕ್ಟರ್ ಜನರಲ್, ಎಟಿಡಿಸಿ, ಗುರುಗಾಂವ್, ಹರಿಯಾಣ	
6.	ಆಯುಕ್ತರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು	
7.	ವ್ಯವಸ್ಥಾಪಕ ನಿರ್ದೇಶಕರು, ದೇವರಾಜ್ ಅರಸು ನಿಗಮ ನಿಯಮಿತ, ಬೆಂಗಳೂರು	ಸದಸ್ಯರು
8.	ವ್ಯವಸ್ಥಾಪಕ ನಿರ್ದೇಶಕರು, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು	ಸದಸ್ಯರು
9.	ವ್ಯವಸ್ಥಾಪಕ ನಿರ್ದೇಶಕರು, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು	ಸದಸ್ಯರು
10.	ಸಂಬಂಧಪಟ್ಟ ಜಿಲ್ಲೆಯ ಪ್ರಾಂಶುಪಾಲರು, ಎಟಿಡಿಸಿ	ಸದಸ್ಯರು
11.	ಜನರಲ್ ಮ್ಯಾನೇಜರ್, ನಬಾರ್ಡ್, ಬೆಂಗಳೂರು	ಸದಸ್ಯರು
12.	ಸಮಾವೇಶಕರು, ಎಸ್‌ಎಲ್‌ಬಿಸಿ, ಸಿಂಡಿಕೇಟ್ ಬ್ಯಾಂಕ್, ಬೆಂಗಳೂರು	ಸದಸ್ಯರು
13.	ಸಂಬಂದಪಟ್ಟ ಜಿಲ್ಲೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು	ಸದಸ್ಯರು
14.	ಸಂಬಂಧಪಟ್ಟ ಸ್ವಯಂ ಸೇವಾ ಸಂಸ್ಥೆಯ ಕಾರ್ಯ ನಿರ್ವಾಹಕ ಅಧಿಕಾರಿಗಳು	ಸದಸ್ಯರು
15.	ಛೇರ್‌ಮನ್, ಅಪೆರಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ (AEPC), ಬೆಂಗಳೂರು	ಸದಸ್ಯರು
16.	ಜಂಟಿ ನಿರ್ದೇಶಕರು, ಅಪೆರಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ (AEPC), ಬೆಂಗಳೂರು	
17.	ಪ್ರಾದೇಶಿಕ ಪ್ರತಿನಿಧಿ, ಕಪಾರ್ಟ್ ಧಾರವಾಡ–580001	ಸದಸ್ಯರು
18.	ನಿರ್ದೇಶಕರು (ಎಸ್‌ಇಪಿ) ಹಾಗೂ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ರಾಜ್ಯ ಮಟ್ಟದ ಸಮನ್ವಯ ಸಮಿತಿಯು ನಿರ್ವಹಿಸಬೇಕಾದ ಕೆಲಸಗಳು:

1. ರಾಜ್ಯದಲ್ಲಿ ಸ್ಥಾಪನೆಯಾಗಿರುವ ಎಲ್ಲಾ ಅಪೆರಲ್ ಟ್ರೈನಿಂಗ್ ಡಿಸೈನ್ ಸೆಂಟರ್‌ನ ಪ್ರಗತಿ ಪರಿಶೀಲನೆ.
2. ಪ್ರತಿ ತಿಂಗಳು 50 ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಿರುವ ಬಗ್ಗೆ ಪರಿಶೀಲನೆ
3. ತರಬೇತಿ ಪಡೆದ ಅಭ್ಯರ್ಥಿಗಳು ಸ್ವಂತ ಉದ್ಯೋಗದಲ್ಲಿ ತೊಡಗಿದ್ದಾರೆಯೇ ಅಥವಾ ಕೂಲಿ ಆಧಾರಿತ ಉದ್ಯೋಗದಲ್ಲಿ ತೊಡಗಿದ್ದಾರೆಯೇ ಎಂಬ ಬಗ್ಗೆ ಪರಿಶೀಲನೆ.
4. ಸಂಸ್ಥೆಯ ಇತರೆ ತರಬೇತಿ ಕೇಂದ್ರ ನಡೆಸುವ ಬಗ್ಗೆ ಆಡಳಿತಾತ್ಮಕ ತೊಂದರೆ ನಿವಾರಣೆ.
5. ತರಬೇತಿ ನೀಡಿದ ಒಟ್ಟು ಅಭ್ಯರ್ಥಿಗಳ ಪೈಕಿ ಎಸ್‌ಜಿಎಸ್‌ವೈ ಸ್ವರೋಜ್‌ಗಾರಿಗಳ ಸಂಖ್ಯೆ
6. ಇತರೆ ಜಿಲ್ಲೆಗಳಲ್ಲಿ ಎಟಿಡಿಸಿ ಸ್ಥಾಪಿಸುವ ಬಗ್ಗೆ

ರಾಜ್ಯ ಮಟ್ಟದ ಸಮನ್ವಯ ಸಮಿತಿಯು ಮೂರು ತಿಂಗಳಿಗೊಮ್ಮೆ ಸಭೆ ಸೇರುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1136

ಎಂ.ಆರ್. ಶ್ರೀನಿವಾಸಮೂರ್ತಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

INFRASTRUCTURE DEVELOPMENT SECRETARIAT

Sub: Release of Government of Karnataka's 50% Balance share of the cost escalation towards Sholapur-Gadag Railway guage conversion project-reg

Read :
1 G.O. No. IDD 1 NSW 03, dt: 03/03/2003
2 G.O. No. IDD 1 NSW 03, dt: 29/03/2003
3 G.O. No. IDD 40 NSW 03, dt: 16/09/2003
4 G.O. No. IDD 95 NSW 03, dt: 22/01/2004
5 G.O. No. IDD 42 NSW 2004, dt: 16/06/2004
6 G.O. No. IDD 21 NSW 05, dt: 22/02/2005
7 G.O. No. IDD 21 NSW 05, dt: 29/03/2005
8 G.O. No. IDD 42 NSW 04 (p), dt: 22/07/2005
9 G.O. No. IDD 42 NSW 04 (p), dt: 15/10/2005
10 G.O. No. IDD 63 IDM 2005, dt: 28/03/2006.
11 Letter No. W 148/RUB/RM.GM dtd 5/10/2006 of CAO.SWR, Bangalore
12 G.O. No. IDD 42 NSW 2004 dt. 25/10/2006.

Preamble:

1. In the Government orders read at S.No. (1) to (10) & (12) above, Government of Karnataka have released their agreed 50% share of balance cost towards Sholapur-Gadag railway guage conversion project amounting to Rs. 109,36,00,000-00.

2. The Chief Administrative Officer, South Western Railway, Bangalore in his letter dated 05.10.2006 at read Sl. No. (11) above, had stated that the total balance amount to be paid by the GoK is Rs. 28.678 crore. However an amount of Rs. 20 crore only was released to SWR vide Government Order read at Sl. No. 12 above. Now the Government had decided to release the balance amount of Rs. 8.00 crores towards Sholapur-Gadag railway guage conversion project out of the budget provided during 2007-08. Hence this order.

Government Order No. IDD 42 NSW 2004, Bangalore, datedL 26th May 2007

1. After careful examination of the above, Government is pleased to accord sanction for release of balance amount of Rs. 8.00 crores (Rupees Eight crores) only towards Sholapur-Gadag guage conversion project.

2. The expenditure shall be met out of the budgeted amount provided under the Head of Account "5465-01-190-3-03 (Plan) 211-Investment towards Sholapur-Gadag guage conversion project during 2007-08.

3. The Chief Executive Officer, K-RIDE is authorized to draw the amount through a payee's receipt duly countersigned by the Under Secretary to Government, Infrastructure Development

Department and K-RIDE shall in turn deposit the same with the Financial Adviser and the Chief Accounts Officer (Construction), South Western Railway, Bangalore.

4. The Chief Executive Officer, K-RIDE shall verify and scrutinize the accounts in respect of the amount released by GoK towards cost escalation for Sholapur-Gadag Railway guage conversion project. The Chief Engineer (Construction), South Western Railway shall arrange to furnish monthly expenditure statement to the Infrastructure Development Department by 5th of the succeeding month.

5. This order issues with concurrence of Finance Department vide its U.O. Note No: FD 822 Exp-I/07 dated 22.05.2007.

By order and in the Name of the Governor of Karnataka

N. Manjula Geetha

Under Secretary to Government,

Infrastructure Development Department.

PR. 1019

Sub: Construction of ROBs/RUBs-Entrustment of Preparation of GAD and Detailed Designs and Drawings to RITES

Read :
1. G.O. No. IDD 5NSW 2000 dated 8/9 June 2000
2. G.O. No. IDD 4 NSW 2002 dated 1/10 October 2002
3. Proceedings of Meeting held on 21/3/07 under the Chairmanship of Principal Secretary, IDD, on the status of ROBs/RUBs in the State.

Preamble:

In the G.O. read at (1) above, RITES was entrusted to carry out the preparation of General Arrangement Drawing (GAD) for construction of ROBs/RUBs in the State of Karnataka. Subsequently, in the G.O. read at (2) above, the procedure for making payment against claims made by RITES has been laid down and sanction was accorded for payment of fees to RITES at the rate of 2% of the abstract cost of works (abstract cost of the works as estimated under GADs-Phase 1) covering 13 ROBs/RUBs. The total payment to RITES for undertaking phase-II of the study would be based on detailed cost of estimates to be prepared and submitted by RITES on approval of final GADS by the Railways / PWD. This list of ROBs/RUBs has been expanded/modified from time to time based on the recommendations of the Steering Committee constituted for monitoring the progress of ROBs/RUBs.

2. There is considerable delay between submission of documents / deliverables and approval by Railway Authorities/PWD. In some cases, after submission, the project preparation work is stopped due to various reasons like transfer of projects to NHAI, dropping of projects etc. In view of the above, RITES requested the Government that 75% of the amount due for particular milestone may be released immediately after submission and the balance 25% after necessary approval from Railway Authorities / PWD. The Steering Committee decided to accept the proposal

3. Government, having considered all the aspects of the matter, issues the following order:

Government Order No. IDD 47 NSW 2007, Bangalore Dated 29th May 2007

In partial modification of the procedure laid down for making payment against claims made by RITES in the G.O. No. IDD 4 NSW 2002 dated 1/10 October 2002 read at (2) above, the following orders are issued.

1. 75% of the amount payable to RITES for each milestone as set out in para 4 (c) of the said G.O. dtd. 1.10.2002 above, may be made immediately after submission of deliverables to Railway Authorities /PWD, as the case may be, and the balance 25% of the amount for that milestone may be released after obtaining documentation / certification as detailed in para 4 (c,d and e) of G.O. mentioned above.

2. The remaining conditions in the G.O. dtd 1.10.2002 shall continue unaltered.

3. This orders shall come into force with immediate effect.

By order and in the Name of the Governor of Karnataka

N. Manjula Geetha

Under Secretary to Government,

Infrastructure Development Department.

PR. 1016

Sub: Entrusting the development of 32 acres and 11.5 guntas of lands at Gangamuthanahalli village to KHB for housing requirements of different Government agencies associated with BIAL.

Read :
1 KSIIDC letter No. GM/3331/2003-04 dt: 31.12.2003
2 Proceedings of the meeting held on 15.3.2007 under the Chairmanship of Principal Secretary, IDD regarding development of 32 acres 11.5 guntas of lands at Gangamuthanahalli for residential purposes.
3 Proceedings of the meeting held on 26.4.2007 under the Chairmanship of Principal Secretary, IDD regarding development of 32 acres 11.5 guntas of lands at Gangamuthanahalli near BIA for residential purposes.

Preamble:

The General Manager, KSIIDC, in his letter read at Sl. No. (1) above had sent a proposal for acquiring land to an extent of 32 acres 11.5 guntas for ancillary requirements along with lands required for Southern-runway and Trumpet interchange.

In the meeting held on 15.3.2007, it was noted that initially the 32 acres 11.5 guntas of land was proposed to be acquired on the request of the villagers of Gangamuthanahalli who has otherwise disposed off their other lands to the airport project (except this land) and relocated to the rehabilitation colony at Balepura village. Further it was also noted that this land was locked in between the airport land on one side and the Bettakote tank on the otherside with no proper approach road. Based on the request of various agencies associated with the airport for housing requirement, this land had been earmarked to meet this specific requirement. On the suggestion of the MD, KSIIDC, it was decided in this meeting that the development and utilization disposal be entrusted to an agency specialized in housing project such as the KHB. Since IDD could not be mobilize the required funds and KSIIDC was not willing to take up the project, it was further decided that KHB can take over the land from IDD and develop it partly by forming independent sites and balances for group housing projects.

2. Further in the meeting held on 26.04.2007, after the Commissioner, KHB had informed that the KHB would be associated with this project, it was agreed that KHB shall take up this project on the basis of paying for and owning the land and developing it exclusively for residential purposes under the following terms.

a. KIADB shall immediately convey to IDD/KHB the estimated requirement of funds for compensation disbursement on the basis of the rate fixed by the advisory committee.
b. KHB shall mobilize and pay to KIADB the amount required for settlement of compensation and take over the land from KIADB.
c. KHB shall reserve about 3-5 acres of land out of the above for allotment to Airports Authority of India in terms of the commitment made by GoK and shall develop the remaining land for appropriate housing project.
d. Allotment of housing tenements by KHB shall be as per IDD's recommendations based on the requirements of various organizations related to airport operations.
e. To constitute a steering committee of IDD, KHB, KSIIDC and KIADB.
f. To address BIAAPA regarding zoning of this land for residential purposes.

3. Keeping in view the decisions taken at the above mentioned meetings Government have considered the proposal and issues the following order.

Government Order No. IDD 20 DIA 2007, Bangalore, dated 15th June 2007

After careful examination of the above proposal, Government have accorded sanction to entrust to the Karnataka Housing Board the development of 32 acres 11.5 guntas of land in Gangamuthanahalli village for residential purposes for the agencies associated with Bangalore International Airport subject to the following terms and conditions.

i) KHB will meet the expenditure incurred for the land acquired by KIADB by depositing the amount to KIADB. The details of amount to be paid shall be obtained from the KIADB by KHB.

ii) Out of this land about 3 to 5 acres of land shall be given to AAI for residential purposes in terms of the commitment made by GoK. The conditions of allotment of land to the AAI will be decided by the Government.

